ಹೊಯ್ಸಳ ಮಾಲೆ - 1

ಶಸ್ತ್ರವೈದ್ಯ ಪ್ರವೀಣ

ಡಾ॥ ಎಸ್. ಸುಬ್ಬರಾಯರು



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

[illegible]

ಆಧಾರ :
ಜ್ಞಾಪಕ ಚಿತ್ರಶಾಲೆ
ಹೃದಯ ಸಂಪನ್ನರು (ಡಿ.ವಿ.ಜಿ)

ಮೊದಲ ಮುದ್ರಣ : ಮಾರ್ಚ್ 2008

ಪ್ರಕಾಶನ :
ಕಾವ್ಯಾಲಯ ಪ್ರಕಾಶಕರು,
ಮೈಸೂರು.

ಕನ್ನಡ ಕಾವ್ಯಮಾಲೆ, ಸಂಪುಟ 7

ವಿಷಯ ಸಂಗ್ರಹಣೆ ಮತ್ತು ನಿರೂಪಣೆ :
ಶಸ್ತ್ರ ವೈದ್ಯ ಪ್ರವೀಣ ಡಾ|| ಎಸ್. ಸುಬ್ಬರಾಯರ ಕುಟುಂಬ ವರ್ಗದವರು.

ಬೆಲೆ : ರೂ. **30/-**

ಮುದ್ರಣ :
ಜ್ವಾಲಾಮುಖಿ ಜಾಬ್ ಪ್ರೆಸ್
ರಾಷ್ಟ್ರ ಪ್ರಶಸ್ತಿ ವಿಜೇತರು
44/1, ಕೆ.ಆರ್.ರಸ್ತೆ, ಬಸವನಗುಡಿ, ಬೆಂಗಳೂರು - 560 004
ಫೋನ್ : 080-26608090, 26617243
www.jwalamukhipress.com

ಒಂದು ಮಾತು

ವಿಜಯನಗರ ಸಾಮ್ರಾಜ್ಯದ ರೂವಾರಿ ವಿದ್ಯಾರಣ್ಯ, ಆದಿಶಂಕರರ ಅವತಾರ ಪುರುಷರೆಂದು ಪ್ರಖ್ಯಾತರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರ ಪರಂಪರೆಯ ॥ಹೊಯ್ಸಳ ಕರ್ನಾಟಕ॥ ಬ್ರಾಹ್ಮಣ ಜನಾಂಗವು ರಾಜಕೀಯ, ಸಾಮಾಜಿಕ ಹಾಗೂ ಸಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಈ ಪಂಗಡದವರು ರಾಜಕೀಯ, ವಾಣಿಜ್ಯ, ಕೈಗಾರಿಕೆ, ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ, ವೈದ್ಯಕೀಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಈ ರೀತಿ ಪ್ರಸಿದ್ಧಿ ಪಡೆದ ಹಿರಿಯ ವ್ಯಕ್ತಿಗಳು ನಮ್ಮ ಯುವಪೀಳಿಗೆಗೆ ಪರಿಚಯಿಸಿ ಅವರಿಗೆ ಚೇತನ ಮತ್ತು ಸ್ಫೂರ್ತಿಯನ್ನು ತುಂಬುವುದೇ ಈ 'ಹೊಯ್ಸಳ ಮಾಲೆ ಯ ಧ್ಯೇಯ'. ಸಂಘದ ಮಾಜಿ ಅಧ್ಯಕ್ಷ ಹಾಗೂ ಹೆಸರಾಂತ ಕೈಗಾರಿಕೋದ್ಯಮಿ ಶ್ರೀ.ಎಂ.ವಿ.ಸತ್ಯನಾರಾಯಣರವರು ಒಂದು ಪುದವಟ್ಟನ್ನು ನಿರ್ಮಿಸಿ ನಮ್ಮ ಸಂಘದ ಮೂಲಕ ಈ ಪುಸ್ತಕ ಮಾಲೆಯನ್ನು ತರಬೇಕೆಂದು ಆಶಿಸಿದರು.

ಹಿರಿಯ ಸಾಹಿತಿಗಳು ಮತ್ತು ಗೌರವಾನ್ವಿತ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿರುವುದು ನಮ್ಮೆಲ್ಲರ ಸುಕೃತ. ಅವರೊಡನೆ ಮಾರ್ಚ್ 1 ಮತ್ತು 2ರಂದು ಮೈಸೂರಿನಲ್ಲಿ ನಡೆಯುವ ಹೊಯ್ಸಳ ಕರ್ನಾಟಕ ಸಂಘಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಮಾಲೆಯ ಮೊದಲ 9 ಪುಸ್ತಕಗಳು ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘ ಕಳೆದ 64 ವರ್ಷಗಳಿಂದ ನಮ್ಮ ಜನಾಂಗದ ಸೇವೆಯಲ್ಲಿ ತೊಡಗಿದೆ. ನಮ್ಮ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಪ್ರತಿಭಾವಂತ ಮತ್ತು ಆರ್ಥಿಕ ದುರ್ಬಲ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುತ್ತಿದೆ. ವರ್ಷಂಪ್ರತಿ ನಡೆಯುವ ಸಂಘ ದಿನಾಚರಣೆಯಂದು ನಮ್ಮ ಜನಾಂಗದ ಹಿರಿಯ

ವ್ಯಕ್ತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಾನಾ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳನ್ನು ಗೌರವಿಸಲಾಗುತ್ತದೆ. ಇಂಥ ಎಲ್ಲಾ ಸಂಘಗಳೊಡನೆ ಕೂಡಿ ಸಹಕರಿಸಲು ನಮಗೆ ತುಂಬಾ ಸಂತಸ.

ನಾಡಿನ ಎಲ್ಲಾ ಹೊಯ್ಸಳ ಕರ್ನಾಟಕ ಸಂಘಟನೆಗಳೂ ಆಗಾಗ್ಗೆ ಕಲೆತು ಅನ್ಯೋನ್ಯತೆಯಿಂದ ಕೆಲಸ ಮಾಡಿ ಜನಾಂಗದ ವಿಶೇಷತೆಗಳನ್ನೂ-ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಎಂದಿಗಿಂತ ಇಂದು ಅತ್ಯವಶ್ಯವಾಗಿದೆ.

ಸುಮಾರು 30 ಲಕ್ಷ ರೂ. ಅಂದಾಜಿನ ಈ ಮಾಲೆಯ ಪ್ರಕಟಣಾ ಕಾರ್ಯವು ಸುಸೂತ್ರವಾಗಿ ನಡೆಯಲು ಸಂಘಕ್ಕೆ ಹೊರೆಯಾಗದಂತೆ ಒಂದು ಆವರ್ತ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಒಂದು ಪುಸ್ತಕದ ಮುದ್ರಣ-ಪ್ರಕಟಣದ ವೆಚ್ಚ ಸುಮಾರು 15 ರಿಂದ 20 ಸಹಸ್ರ ರೂ.ಗಳಾಗಬಹುದು. (ನಮ್ಮ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿನಿಲಯಗಳಿಗೂ ಈ ಪುಸ್ತಕದ ಕೆಲವು ಪ್ರತಿಗಳನ್ನು ಉಚಿತವಾಗಿ ಕಳಿಸಲು ಯೋಜಿಸಲಾಗಿದೆ). ನಮ್ಮ ಎಲ್ಲಾ ಬಾಂಧವರೂ ಈ ಯೋಜನೆಯ ಯಶಸ್ಸಿಗೆ ಕೆಳಕಂಡಂತೆ ಸಹಾಯ ಮಾಡಬಹುದು.

1. ಒಂದು ಅಥವಾ ಹೆಚ್ಚು ಪುಸ್ತಕಕ್ಕೆ ಪ್ರಾಯೋಜಕರಾಗಬಹುದು. ಪ್ರಾಯೋಜಕರ ಹೆಸರನ್ನು ಆಯಾ ಪುಸ್ತಕಗಳಲ್ಲಿ ಪ್ರಕಟಿಸಲಾಗುವುದು.
2. ಒಂದು ಕುಟುಂಬದಿಂದ ಅಥವಾ ಇಬ್ಬರು ಮೂವರೂ ಸೇರಿ ಒಂದು ಅಥವಾ ಹೆಚ್ಚು ಪುಸ್ತಕಗಳ ಪ್ರಾಯೋಜಕರಾಗಬಹುದು.
3. ಪುಸ್ತಕಗಳನ್ನು ಕೊಂಡು ನಿಮ್ಮ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಬಂಧು ಬಾಂಧವರಿಗೆ ಹಂಚುವುದು.
4. ಈ ಉದ್ದೇಶಕ್ಕಾಗಿ ದೇಣಿಗೆ ನೀಡುವುದು.
5. ಈ ಮಾಲೆಯ ಬಗ್ಗೆ ನಿಮ್ಮ ಬಂಧುಗಳಿಗೆ ತಿಳಿಸಿ ಅವರೂ ಈ ಕಾರ್ಯಗಳಲ್ಲಿ ನೆರವಾಗಲು ಪ್ರೇರೇಪಿಸುವುದು. ಪುಸ್ತಕದ ಮಾರಾಟ ಮತ್ತು ನಿಮ್ಮ ನೆರವು

ಪ್ರೋತ್ಸಾಹದಾಯಕವಾದರೆ ಸಂಘ ಪ್ರತಿ ಎರಡು ತಿಂಗಳಿಗೊಮ್ಮೆ 8 ರಿಂದ 12 ಪುಸ್ತಕಗಳನ್ನು ಪ್ರಕಟಿಸಲು ಶಕ್ತವಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ಪುಸ್ತಕ ಮಾಲೆಯನ್ನು ಮುದ್ರಿಸಲು ಅತ್ಯಂತ ಅತಿಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ನಮ್ಮವರೇ ಆದ ಜ್ವಾಲಾಮುಖಿ ವಾರಪತ್ರಿಕೆಯ ಸಂಸ್ಥಾಪಕ ದಿ. ಸಿ.ಎಸ್. ಸತ್ಯ ಇವರ ಮಕ್ಕಳಾದ ಶ್ರೀಯುತ. ಶಿವಕುಮಾರ್. ರವಿಪ್ರಸಾದ್ ಮತ್ತು ಶಂಕರ್ ಇವರಿಗೆ ಸಂಘ ಆಭಾರಿಯಾಗಿದೆ.

ನಮ್ಮ ಕೋರಿಕೆಯನ್ನು ಮನ್ನಿಸಿ ವಿಷಯಗಳನ್ನು, ಉಪಯುಕ್ತಮಾಹಿತಿಗಳನ್ನು, ಪೋಟೋಗಳನ್ನ ಸಂಗ್ರಹಿಸಿ ಅಂದವಾಗಿ ಈ ಪುಸ್ತಕವನ್ನು ಸಿದ್ಧಪಡಿಸಿರುವ ನಮ್ಮ ಆತ್ಮೀಯ ಲೇಖಕರಿಗೂ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ದಣಿವನ್ನೂ ಲೆಕ್ಕಿಸದೆ ಉತ್ಸಾಹದ ಚಿಲುಮೆಯಾಗಿ ನಮಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನ ಸಂಪಾದಕರಾದ ಪ್ರೊ.ಜಿ.ವೆಂಕಟಸುಬ್ಬಯ್ಯ ರವರಿಗೆ ಸಂಪಾದಕರ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಮಾಜಿ ಅಧ್ಯಕ್ಷ ಶ್ರೀ.ಎಂ.ವಿ.ಸತ್ಯನಾರಾಯಣರವರಿಗೆ ನಮ್ಮ ಕೃತಜ್ಞತೆಗಳು.

ಅರೆಕೆರೆ ಗೌರಿಶಂಕರ
ಅಧ್ಯಕ್ಷರು
ಹೊಯ್ಸಳ ಕರ್ನಾಟಕ ಸಂಘ(ರಿ.)
ಬೆಂಗಳೂರು-27

ಮುನ್ನುಡಿ

ಒಮ್ಮೆ ನಾನು ಶ್ರೀ ಎಂ.ವಿ. ಸತ್ಯನಾರಾಯಣ ಅವರೊಡನೆ ಮಾತನಾಡುತ್ತ ಇದ್ದಾಗ ಅವರು ''ನಮ್ಮ ಹೊಯಿಸಳ ಕರ್ನಾಟಕ ಪಂಗಡದ ಹಿಂದಿನ ಹಿರಿಯ ವ್ಯಕ್ತಿಗಳಲ್ಲಿ ಪ್ರಸಿದ್ಧರಾಗಿದ್ದು ಅನೇಕ ಸಾಧನೆಗಳನ್ನು ಮಾಡಿದವರ ಬಗ್ಗೆ ಏನಾದರೂ ಚಾರಿತ್ರಿಕ ವಿವರಗಳಿವೆಯೊ?'' ಎಂದು ಕೇಳಿದರು. ಈ ಬಗ್ಗೆ ನಾನು ಅನೇಕ ದಿನಗಳಿಂದ ಚಿಂತನೆ ಮಾಡುತ್ತಿದ್ದೆ. ಸಾಧ್ಯವಾದರೆ ಶಾಸನಗಳ ಮತ್ತು ಪ್ರಾಚೀನ ಸಾಹಿತ್ಯದ ಆಧಾರಗಳಿಂದ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೆಲವು ವಿಷಯಗಳನ್ನು ಸಂಗ್ರಹಿಸಿದ್ದೆ.

'ಹೊಯ್ಸಳ' ಎಂಬ ಶಬ್ದವು ದೇಶವಾಚಕವಾದದ್ದು. ಅದು 'ಪೊಯಿಸಣ' ಎಂಬ ಶಬ್ದದ ಈಗಿನ ರೂಪ. ಶಾಸನಗಳಲ್ಲಿ 'ಪೊಯಿಸಣನಾಡು' ಎಂಬ ಉಲ್ಲೇಖವಿದೆ. ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣನು ತಾನು 'ಪೊಯಿಸಣಿಗ' ಕುಲದವನು ಎಂದು ಹೇಳಿಕೊಂಡಿದ್ದಾನೆ. ಅವನ ಕಾಲ 1830. ನಾವೆಲ್ಲ ನಮ್ಮನ್ನು ಕರ್ನಾಟಕರು, ಕನ್ನಡಿಗರು, ಕನ್ನಡ ಕುಲಕ್ಕೆ ಸೇರಿದವರು ಎಂದು ಹೇಳಿಕೊಂಡಿರುವುದಕ್ಕೆ ಆಧಾರವಿದೆ. ಈ ವಿಚಾರವನ್ನು ಹಿಂದೆ ಪ್ರಕಟವಾದ ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಅನೇಕ ದಾನ ಶಾಸನಗಳು ಹೊಯಿಸಳ ಕರ್ನಾಟಕರ ಮನೆತನಗಳಲ್ಲಿ ಈಗಲೂ ಕಾಣಬರುತ್ತವೆ. ಈ ಗುಂಪಿನ ಜನರಲ್ಲಿ ಅನೇಕ ವಿದ್ವಾಂಸರು, ಪ್ರಸಿದ್ಧ ವೈದ್ಯರು, ಪರಿಣತರಾದ ಸಂಗೀತಗಾರರೂ, ವಾದ್ಯ ನಿಪುಣರು ಇದ್ದರು. ಈ ಬಗ್ಗೆ ಚಾರಿತ್ರಿಕವಾಗಿ ಯಾವ ದಾಖಲೆಯೂ ಆಗದೆ ಎಲ್ಲ ಕತ್ತಲೆಯಲ್ಲಿ ಮುಳುಗಿಹೋಗಿದೆ. ಸಂಶೋಧನೆ ಮಾಡಿದರೆ ಅನೇಕ ವಿಷಯಗಳು ದೊರೆಯುತ್ತವೆ. ನಾನು ಈ ಬಗ್ಗೆ ಕೆಲವು ವಿವರಗಳನ್ನು ಶ್ರೀ ಸತ್ಯನಾರಾಯಣ ಅವರಿಗೆ ನೀಡಿದೆ. ಅವರು ''ಈಗಲಾದರೂ ನಾವು ನಮಗೆ ದೊರಕುವಷ್ಟು ವಿವರಗಳನ್ನು ಸಂಗ್ರಹಿಸಿ ವಿವಿಧ ವಿದ್ವಾಂಸರ, ಸಂಗೀತಗಾರರ, ವೈದ್ಯರ, ಪುರಾಣಿಕರ, ಪ್ರವಚನಕಾರರ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸೋಣ. ಮುಂದೆ ಸಂಶೋಧನೆಗಳಿಂದ ಹೆಚ್ಚು ವಿವರಗಳು ದೊರಕಿದರೆ ಅದನ್ನು ಪ್ರಕಟ ಮಾಡೋಣ. ಇಂಥ ಕೆಲಸಕ್ಕೆ ನಾನು ಒಂದು ಲಕ್ಷ ರೂಪಾಯಿಗಳ ಒಂದು

ದತ್ತಿಯನ್ನು ನೀಡುತ್ತೇನೆ. 'ಹೊಯ್ಸಳವಾಲೆ' ಎಂಬ ಹೆಸರಿನಲ್ಲಿ ಈ ಪುಸ್ತಕಗಳು ಪ್ರಕಟವಾಗಲಿ. ನೀವು ಈ ಮಾಲೆಯ ಪ್ರಧಾನ ಸಂಪಾದಕರಾಗಿ ಕಾರ್ಯವನ್ನು ನಡೆಸಿಕೊಡಬೇಕು'' ಎಂದು ನಿರ್ಧಾರವಾಗಿ ಹೇಳಿಬಿಟ್ಟರು. ಈ ಕೆಲಸಕ್ಕಾಗಿ ಕೂಡಲೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಬಿಟ್ಟರು. ಆ ಮಂಡಲಿಯ ಸ್ವರೂಪ ಹೀಗಿತ್ತು:

1. ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರಧಾನ ಸಂಪಾದಕರು
2. ಶ್ರೀ ಗರುಡನಗಿರಿ ನಾಗರಾಜ, ಸದಸ್ಯರು
3. ಶ್ರೀ ಬಿ.ಜೆ. ಶ್ರೀರಂಗಯ್ಯ, ಸದಸ್ಯರು
4. ಶ್ರೀ ಬಿ.ಎನ್. ಅನಂತನಾರಾಯಣ, ಸದಸ್ಯರು
5. ಶ್ರೀಮತಿ ಶಾರದಾ ಶಾಮಣ್ಣ, ಸದಸ್ಯರು
6. ಶ್ರೀ ಎ.ವಿ. ಸತ್ಯನಾರಾಯಣ, ಸಂಚಾಲಕರು

ಈ ಸಭೆಯು ಸೇರಿ ಒಂದು ಕಾರ್ಯಕ್ರಮವನ್ನು ನಿರ್ಧಾರ ಮಾಡಿದೆ.

ಮೊದಲಿಗೆ ಕಿಂಚಿತ್‌ಪೂರ್ವದಲ್ಲಿ ಬದುಕಿದ್ದ ಹಿರಿಯರಲ್ಲಿ ಹತ್ತು ಜನರನ್ನು ಗುರುತಿಸಿ ಅವರ ಬಗ್ಗೆ ತಿಳಿವಳಿಕೆಯುಳ್ಳವರಿಂದ 1/8 ಡೆಮ್ಮಿ 64 ಪುಟಗಳ ಪುಸ್ತಕಗಳನ್ನು ಬರೆಯಿಸಬೇಕು. ಹೀಗೆ ಈ ಮಾಲೆಗೆ ಪುಸ್ತಕಗಳನ್ನು ರಚಿಸುವವರು ತಮ್ಮ ಬರವಣಿಗೆಯಲ್ಲಿ ಸತ್ಯಕ್ಕೆ ಅಪಚಾರವಾಗದ ಹಾಗೆ, ಯಾವ ವಿರೋಧವನ್ನು ಸೃಷ್ಟಿಸಿದ ಹಾಗೆ, ಯಾವ ಅನುಮಾನಗಳಿಗೂ ಅವಮಾನಗಳಿಗೂ ಅವಕಾಶವಾಗದ ಹಾಗೆ, ಅತಿಉತ್ಪ್ರೇಕ್ಷೆಯಾಗಲಿ, ಅತಿ ಸಂಕೋಚ ಪ್ರವೃತ್ತಿಯಾಗಲಿ ಇರದಂತೆ ಬರೆಯಬೇಕು. ಅತ್ಯುಕ್ತಿಯು ಓದುಗರಿಗೆ ಬೇಸರವನ್ನುಂಟುಮಾಡುತ್ತದೆ. ಅತಿ ಸಂಕೋಚ ವ್ಯಕ್ತಿಗೆ ಅಪಚಾರವಾಗುತ್ತದೆ. ಆದುದರಿಂದ ಬರವಣಿಗೆಯು ಸುವರ್ಣ ಮಧ್ಯಮದಲ್ಲಿ ಪ್ರಸನ್ನತೆಯನ್ನು ಗಾಂಭೀರ್ಯವನ್ನು ಉಂಟುಮಾಡುವಂತೆ ನೋಡಿಕೊಳ್ಳಬೇಕೆಂದು ಬರಹಗಾರರಿಗೆ ತಿಳಿಸಬೇಕು. ವ್ಯಕ್ತಿಗಳ ಸಾಧನೆಯನ್ನು ಹಿರಿಮೆಯನ್ನು ಎತ್ತಿ ತೋರಿಸಬೇಕು ಎಂದು ತೀರ್ಮಾನಿಸಲಾಯಿತು.

ಇಷ್ಟೆಲ್ಲ ಪೂರ್ವಸಿದ್ಧತೆಯಿಂದ ಈಗ ಪ್ರಕಟವಾಗಿರುವ ಪುಸ್ತಕಗಳು ರಚಿತವಾಗಿವೆ. ಇವು ಹೊಯ್ಸಳ ಕರ್ನಾಟಕ ಯುವಕ ಯುವತಿಯರ ಭವಿಷ್ಯಕ್ಕೆ ಮಾರ್ಗದರ್ಶಕವಾಗಬೇಕು. ಇತರ ಉದಯೋನ್ಮುಖರಿಗೂ ಆಸಕ್ತಿಯನ್ನು

ಕೆರಳಿಸುವಂತಿರಬೇಕು. ಈ ಪುಸ್ತಕಗಳನ್ನು ಓದುವವರು ಇವುಗಳ ಪ್ರಕಟಣೆಯಲ್ಲಿ ಏನಾದರೂ ವಿಶೇಷ ವಿಷಯಗಳು ಇರಬೇಕೆಂದು ಬಯಸಿದರೆ ಆ ವಿವರಗಳನ್ನು ನಮಗೆ ತಿಳಿಸಿದರೆ ಅಂಥ ಎಲ್ಲ ಸಲಹೆಗಳಿಗೂ ಸ್ವಾಗತವಿದೆ ಎಂದು ಹೇಳಬಯಸುತ್ತೇವೆ.

'ಹೊಯ್ಸಳ ಮಾಲೆ'ಗೆ ಪುಸ್ತಕಗಳನ್ನು ರಚಿಸಿದವರಿಗೆಲ್ಲ ನಮ್ಮ ವಂದನೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಣಕ್ಕೆ ಸಿದ್ಧಮಾಡುತ್ತಿದ್ದಾಗ ನನ್ನ ಪುಸ್ತಕ ಭಂಡಾರದಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡಿರುವ ವಿವರಗಳನ್ನು ಹುಡುಕಿ ಸಮಯಕ್ಕೆ ಸರಿಯಾಗಿ ನನಗೆ ಸಹಾಯ ಮಾಡಿದ ನನ್ನ ಕಿರಿಯ ಮಗ ಚಿ॥ ಜಿ.ವಿ. ಅರುಣನಿಗೆ ಶುಭವನ್ನು ಕೋರುತ್ತೇನೆ.

ಹೊಯಿಸಳ ಕರ್ನಾಟಕ ಬಂಧುಗಳು ಈ ಮಾಲೆಗೆ ಎಲ್ಲ ಬೆಂಬಲವನ್ನು ನೀಡಿ, ಈ ಮಾಲೆ ನೂರನ್ನು ದಾಟಲಿ ಎಂದು ಹರಸಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಜಿ. ವೆಂಕಟಸುಬ್ಬಯ್ಯ
ಸಂಪಾದಕ ಮಂಡಲಿಯ ಪರವಾಗಿ

ನಂ. 58, 31ನೇ ಕ್ರಾಸ್
7ನೇ ಬ್ಲಾಕ್, ಜಯನಗರ
ಬೆಂಗಳೂರು–560 070.
1–3–2008

20ನೇ ಶತಮಾನದ ಆದಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ನಿಸ್ಪೃಹ ಸೇವೆ ಸಲ್ಲಿಸಿ ಅಮರ ಕೀರ್ತಿಯನ್ನು ಪಡೆದ ದಿಗ್ಗಜರಲ್ಲಿ ಅನೇಕ ಮಹನೀಯರುಗಳಿದ್ದರೂ, ವೈದ್ಯಕೀಯ ಕ್ಷೇತ್ರದಲ್ಲಿಯೂ ಸಮಾಜ ಸೇವೆಯಲ್ಲಿಯೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ವಿಶೇಷ ಛಾಪು ಮೂಡಿಸಿದವರು ಕುಶಲ ಶಸ್ತ್ರವೈದ್ಯ ಡಾ॥ ಎಸ್.ಸುಬ್ಬರಾಯರು. ಇವರ ಬಹುಮುಖ ಸೇವೆ ಅವಿಸ್ಮರಣೀಯ. ಹಳೆಯ ಮೈಸೂರು ಸಂಸ್ಥಾನದ ಆರೋಗ್ಯ ಸೇವೆಯನ್ನು ಹಲವಾರು ವಿಧದಲ್ಲಿ ಉತ್ತಮಗೊಳಿಸಿ, ಸಂಸ್ಥಾನಾದ್ಯಂತ ಜಿಲ್ಲಾ ಆಸ್ಪತ್ರೆಗಳು, ಬಹುಸಂಖ್ಯೆ ಔಷಧಾಲಯಗಳನ್ನು ಸ್ಥಾಪಿಸಿ ಬಡವರಿಗೂ ಬಲ್ಲಿದರಿಗೂ ಮಾಡಿದ ಬಹುಮುಖಿ ಸೇವೆಯನ್ನು ಪರಿಗಣಿಸಿ ಮೈಸೂರು ಸಂಸ್ಥಾನವನ್ನಾಳಿದ ಮಹಾಪ್ರಭು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಡಾ॥ ಸುಬ್ಬರಾಯರಿಗೆ "ಶಸ್ತ್ರವೈದ್ಯ ಪ್ರವೀಣ" ಎಂಬ ಬಿರುದು ದಯಪಾಲಿಸಿದರು.

ಡಾ॥ ಸುಬ್ಬರಾಯರ ಜನನ 24–06–1883 ರಂದು ಮೈಸೂರು ನಗರದಲ್ಲಿ ಅಬಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಪೂಜ್ಯ ಶ್ರೀಕಂಠಯ್ಯನವರಿಗೆ ಜ್ಯೇಷ್ಠಪುತ್ರರಾಗಿ ಜನಿಸಿದವರು. ಮಾತೆ ಶ್ರೀಮತಿ ಪುಟ್ಟಕ್ಕಯ್ಯನವರು. ಡಾ॥ ಸುಬ್ಬರಾಯರಿಗೆ ಇಬ್ಬರು ಸಹೋದರರು. ಗೋವಿಂದ ಶರ್ಮ ಮತ್ತು ನಾರಾಯಣ ಶರ್ಮ. ಗೋವಿಂದ ಶರ್ಮರವರು ಸಿವಿಲ್ ಜಡ್ಜ್ ಆಗಿ ನಿವೃತ್ತಿ ಹೊಂದಿದರು. ನಾರಾಯಣ ಶರ್ಮರವರು ಇಂಜಿನಿಯರಿಂಗ್ ಇಲಾಖೆಯಲ್ಲಿ ಸೇವಾ ನಿರತರಾಗಿ ಸಹಾಯಕ ಅಭಿಯಂತರರಾಗಿ ನಿವೃತ್ತಿಯಾದರು.

ಮಾತಾ ಪಿತೃಗಳು ದೈವಭಕ್ತರು, ಧರ್ಮಭೀರುಗಳು ಅಲ್ಲದೆ ಶಿಸ್ತಿನ ಸಿಪಾಯಿಗಳಾಗಿದ್ದರು. ತಮ್ಮ ಮಾತಾ ಪಿತೃಗಳ ಈ ಗುಣಗಳನ್ನು ಬಳುವಳಿಯಾಗಿ ಪಡೆದುಕೊಂಡ ಸುಬ್ಬರಾಯರು, ಅದನ್ನು ತಮ್ಮದೇ ಆದ ರೀತಿಯಲ್ಲಿ ಊರ್ಜಿತಗೊಳಿಸಿಕೊಂಡು ಸೇವೆಯನ್ನೇ ಜೀವನ ಧ್ಯೇಯವನ್ನಾಗಿಸಿಕೊಂಡು ಜನಮನದಲ್ಲಿ ಚಿರಸ್ಥಾಯಿಯಾಗಿ ನಿಂತವರು.

ಡಾ॥ ಎಸ್. ಸುಬ್ಬರಾಯರ ಪೂರ್ವಿಕರು ಮುನಿಷಿ ಲಕ್ಷ್ಮೀನಾರಾಯಣಪ್ಪನವರ ವಂಶಸ್ಥರು. ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು ಗ್ರಾಮಕ್ಕೆ ಸೇರಿದವರು ಅಕ್ಕಿ ಹೆಬ್ಬಾಳು ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿದೆ. ಸುಬ್ಬರಾಯರ ಪೂರ್ವಿಕರ ಕೆಲವು ವಂಶಜರು ಈಗಲೂ ಕೃಷ್ಣರಾಜಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿಯೂ ಹಾಗೂ ಅಕ್ಕಿ ಹೆಬ್ಬಾಳಿನಲ್ಲಿಯೂ ವಾಸವಾಗಿದ್ದಾರೆ. ಅವರ ಪೂರ್ವಿಕರಲ್ಲಿ ಕೆಲವರು 1830ರ ಸರಿಸುಮಾರಿನಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇವರ ಕುಶಲ ಸೇವೆಯನ್ನು ಪರಿಗಣಿಸಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಅನೇಕಕ ಮಾನ್ಯಗಳನ್ನು ಪಡೆದಿದ್ದರೆಂದು ಪ್ರತೀತಿ. ಸುಬ್ಬರಾಯರ ತಾತ, ಮುತ್ತಾತಂದಿರು ಅಕ್ಕಿ ಹೆಬ್ಬಾಳಿನಲ್ಲಿ ಗದ್ದೆಮಾನ್ಯಗಳನ್ನು ಪಡೆದಿದ್ದರೆಂಬುದು ಗತಕಾಲದ ವೈಭವದ ಮಾತಾಯಿತು. ಕಾಶ್ಯಪಗೋತ್ರದವರಾದ ಸುಬ್ಬರಾಯರ ತಾತನವರು ಲಕ್ಷ್ಮೀನಾರಯಣಪ್ಪನವರು, ಹಾಗೂ ಮುತ್ತಾತ ಲಕ್ಷ್ಮೀ ನರಸಿಂಹಯ್ಯನವರು. ಕಳೆದ ಶತಮಾನಗಳಲ್ಲಿ ಮಲೇರಿಯ ರೋಗದ ಹಾವಳಿ ಬಹು ಜನರನ್ನು ಬಲಿ ತೆಗೆದು ಕೊಂಡಿದ್ದು ಎಲ್ಲರಿಗೂ ತಿಳಿದ ವಿಷಯ. ಅಕ್ಕಿ ಹೆಬ್ಬಾಳು ಈ ರೋಗಕ್ಕೆ ಹೊರತಾಗಲಿಲ್ಲ. ಇಲ್ಲಿಗೂ ಬಂದ ಈ ಮಾರಿರೋಗದ ದೆಸೆಯಿಂದ ಸುಬ್ಬರಾಯರ ಪೂರ್ವಿಕರಲ್ಲಿ ಕೆಲವರು ಮೈಸೂರಿಗೂ ಮತ್ತೆ ಕೆಲವರು ಹಾಸನಕ್ಕೂ ವಲಸೆ ಹೋದರು.

ಡಾ॥ ಸುಬ್ಬರಾಯರ ತಂದೆ ಎಮ್.ಶ್ರೀಕಂಠಯ್ಯನವರು 1860–61ರ ಕಾಲದಲ್ಲಿ ಲಕ್ಷ್ಮೀನಾರಾಯಣಪ್ಪನವರಿಗೆ ಪುತ್ರರಾಗಿ ಜನಿಸಿದರು. ಆಗಿನ ಕಾಲದಲ್ಲಿ ಲಭ್ಯವಿದ್ದ ಶಿಕ್ಷಣವನ್ನು ಪಡೆದು ಹಾಸನ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಲ್ಲಿ ಕೆಲಸಕ್ಕೆ ಸೇರಿದರು. ಶ್ರೀಕಂಠಯ್ಯನವರು ಪುಟ್ಟಕ್ಕಯ್ಯ ಎಂಬ ಕನ್ಯಾರತ್ನವನ್ನು ವಿವಾಹವಾದರು. ಪುಟ್ಟಕ್ಕಯ್ಯ ವಂಶಸ್ಥರು ಮಾಗಡಿಯವರು; ಜಮೀನು ಒಡೆಯರು. ಪುಟ್ಟಕ್ಕಯ್ಯನವರ ಸಹೋದರರು ಕಾಲಕ್ರಮೇಣ ಮೈಸೂರಿಗೂ, ಶ್ರೀರಂಗಪಟ್ಟಣಕ್ಕೂ ಜೀವನಕ್ಕಾಗಿ ವಲಸೆ ಹೋದರು. ಅವರ ತಮ್ಮಂದಿರಲ್ಲಿ ಒಬ್ಬರ ಹೆಸರು ರಾಮಣ್ಣ ಎಂದು. ಅವರು ಮೈಸೂರಿನಲ್ಲಿ ಸ್ಟಾಂಪ್

ವೆಂಡರಾಗಿದ್ದರು. ಮತ್ತೊಬ್ಬ ತಮ್ಮ ನರಸಿಂಹಯ್ಯನವರು ಮೈಸೂರಿನ ಹಳ್ಳದ ಕೇರಿಯಲ್ಲಿ ವಾಸವಾಗಿದ್ದರು.

ಸುಬ್ಬರಾಯರ ತಂದೆ ಸರಳ ಜೀವಿಗಳು, ದೈವ ಭಕ್ತರು. ಅವರ ವೇತನ 25–50 ರೂಗಳಿಗೆ ಸೀಮಿತವಾಗಿದ್ದಿತು. ಈಗಿನಂತೆ ಲಕ್ಷಗಟ್ಟಲೆ ಏನೂ ಇರಲಿಲ್ಲ. ಆದರೂ ಅವರು ಆಗಿನ ಕಾಲದಲ್ಲಿ ಪ್ರಚಲಿತವಾಗಿದ್ದ ಕುದುರೆ, ಕುದುರೆ ಸಾರೋಟುಗಳನ್ನು ಇಟ್ಟುಕೊಂಡೇ ಸುಖಕರ ಜೀವನ ನಡೆಸಿದವರು. ಮನೆಯಲ್ಲಿ ಅತಿಥಿಗಳಿಗೂ, ಬಡಬ್ರಾಹ್ಮಣ ವಟುಗಳಿಗೂ ದಿನನಿತ್ಯ ಊಟೋಪಚಾರಗಳಿಗೆ ನೆರವಾಗಿದ್ದವರು. ನಿವೃತ್ತರಾದ ಮೇಲೆ ಮೈಸೂರಿಗೆ ಬಂದು ನೆಲಸಿ ಮೈಸೂರು ಮುನಿಸಿಪಾಲಿಟಿಯಲ್ಲಿ ಪುನಃ ಸೇವೆ ಸಲ್ಲಿಸಿದರು. ಅವರಿಗೆ ಕನ್ನಡ ಭಾಷೆಯ ಹಾಗೂ ಸ್ವಲ್ಪ ಮಟ್ಟಿಗೆ ಇಂಗ್ಲೀಷ್ ಭಾಷೆಯ ಪರಿಚಯವಿದ್ದಿತು. ಮೈಸೂರಿನಲ್ಲಿ ಲಕ್ಷ್ಮೀಪುರದಲ್ಲಿ ನಿವೇಶನವನ್ನು ಕೊಂಡು ಮನೆಕಟ್ಟಿಸಿಕೊಂಡರು. ಅವರು ಮೈಸೂರಿನ ಸಮೀಪದ ಗ್ರಾಮವೊಂದರಲ್ಲಿ ಜಮೀನನ್ನು ಹೊಂದಿದ್ದರು. ಸರಳ ಜೀವಿಗಳಾದ ಶ್ರೀಕಂಠಯ್ಯನವರಿಗೆ ಅನೇಕ ಸ್ನೇಹಿತರು ಮತ್ತು ಆಪ್ತರೂ ಇದ್ದರು. ಎಂ.ಎಸ್.ಪುಟ್ಟಣ್ಣನವರು, ಎಂ.ವಿ.ಸುಬ್ಬರಾಯರು, ಡಾ॥ ರಂಗಣ್ಣನವರು, ಎಂ.ಸುಬ್ಬಯ್ಯನವರು, ಅಯ್ಯಾ ಶಾಸ್ತ್ರಿಗಳೇ ಮುಂತಾದ ಮಹನೀಯರು ಇವರ ಆಪ್ತರು.

ಕುಲಬಾಂಧವರಿಗೂ, ಸಮಾಜದವರಿಗೂ ತಮ್ಮ ಕೈಲಾದ ಸಹಾಯ ಹಸ್ತವನ್ನು ನೀಡಿ ಆದರಣೀಯ ವ್ಯಕ್ತಿಗಳಾಗಿದ್ದರು.

ಶ್ರೀಕಂಠಯ್ಯನವರು ಅವರ ತಂದೆಗೆ ಎರಡನಯ ಮಗ. ಅವರಿಗೆ 3 ಜನ ಸಹೋದರರು. ಒಬ್ಬ ಅಣ್ಣನ ಸಂತತಿಯವರು ಮೈಸೂರಿನ ಸುಪ್ರಸಿದ್ಧ ವಕೀಲರೂ, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ದಿ॥ ಲಾಂಯುರ್ ಲಕ್ಷ್ಮೀನಾರಾಯಣರಾಯರು ಮತ್ತು ಅವರ ಸಹೋದರ ಶ್ರೀಯುತ ರಾಮಕೃಷ್ಣರವರು. ಶ್ರೀಕಂಠಯ್ಯನವರ ತಮ್ಮಂದಿರ ಪೈಕಿ ಗೋವಿಂದಯ್ಯ ನವರ

ಪ್ರ.ಕಠೋಟ್ಟರು ಎಸ್.ಜಿ.ನರಸಿಂಹಯ್ಯ, ಇನ್ನೊಬ್ಬ ತಮ್ಮ ನಂಜಪ್ಪನವರ ಮಗ ಎನ್.ನರಸಿಂಹಮೂರ್ತಿ (ಎನ್.ಎನ್.ಮೂರ್ತಿ) ಬೊಂಬಾಯಿ, ಸಾಂಗ್ಲಿ, ಅಹಮದಾಬಾದ್ ಪ್ರಾಂತ್ಯಗಳಲ್ಲಿ ಸೇವೆಸಲ್ಲಿಸಿದವರು. ಶ್ರೀಕಂಠಯ್ಯನವರ ಅಕ್ಕ ಭಾಗಮ್ಮನವರು ಚಿಕ್ಕಂದಿನಲ್ಲಿಯೇ ವಿಧವೆಯಾದರು, ಆದರೆ ಒಬ್ಬ ದತ್ತು ಪುತ್ರನನ್ನು ಸ್ವೀಕರಿಸಿದ್ದರು. ಆ ಪುತ್ರನ ಹೆಸರು ನರಹರಿರಾವ್. ಇವರು ಮೈಸೂರು, ಬೆಂಗಳೂರು, ಊಟಿ, ಮದ್ರಾಸ್‌ಗಳಲ್ಲಿ ಹೋಟೆಲ್‌ಗಳನ್ನು ಸ್ಥಾಪಿಸಿ ದೊಡ್ಡ ಉದ್ಯಮಿಗಳಾದರು.

ಸುಬ್ಬರಾಯರ ಜನನ, ಬಾಲ್ಯ , ವಿದ್ಯಾಭ್ಯಾಸ, ವಿವಾಹ:

ಡಾ॥ ಸುಬ್ಬರಾಯರು ಶ್ರೀಕಂಠಯ್ಯನವರಿಗೆ ಜ್ಯೇಷ್ಠ ಪುತ್ರರಾಗಿ ಶಾಲೀವಾಹನ ಶಕ 1804, ಸ್ವಭಾನು ಸಂವತ್ಸರದ ಜೇಷ್ಠಮಾಸದಲ್ಲಿ ಬಹುಳ ದಿನ 13ನೆ ಶುಕ್ರವಾರ ರೋಹಿಣಿ ನಕ್ಷತ್ರ ಸಿಂಹರಾಶಿಯಲ್ಲಿ ಜನಿಸಿದರು. ಹುಟ್ಟಿದ ದಿನ ಇಂಗ್ಲೀಷ್ ತಾರೀಖಿನಲ್ಲಿ 24–06–1883. ಇವರು ಹುಟ್ಟಿದಾಗ ಶ್ರೀಕಂಠಯ್ಯನವರು ಹಾಸನ ಪ್ರಾಂತ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರೆಂದು ತೋರುತ್ತದೆ. ಶ್ರೀಕಂಠಯ್ಯನವರು ಮೈಸೂರಿಗೆ ವರ್ಗವಾಗಿ ಬಂದ ನಂತರ ಸುಬ್ಬರಾಯರ ವ್ಯಾಸಂಗ ಪ್ರಾರಂಭವಾಯಿತು. ಮೊದಲ ಪಾಠಶಾಲೆ "ಮೈಸೂರಿನ ವೆಸ್ಲಿಯನ್ ಮಿಷನ್" ಸ್ಕೂಲು. ಆಗ ಆ ಪಾಠಶಾಲೆಯಲ್ಲಿ ಹೋಲ್ಡ್ಸ್‌ವರ್ತ್ (Holdsworth) ಎಂಬ ಪಾದ್ರಿ ಉಪಧ್ಯಾಯರಿದ್ದರು. ಅವರು ಶ್ರೀ ಸುಬ್ಬರಾಯರ ಮೇಲೆ ಪ್ರಭಾವ ಬೀರಿದಂತೆ ಕಾಣುತ್ತದೆ. ಏಕೆಂದರೆ ಪಾದ್ರಿಯವರ ಸೇವಾ ಮನೋಭಾವ, ಕಾರುಣ್ಯ, ಬಡಜನರನ್ನು ಕಂಡರೆ ಸಹಾನುಭೂತಿ, ಅನುಕಂಪ ಎಲ್ಲವೂ ಬಾಲಕ ಸುಬ್ಬರಾಯರಿಗೆ ಮನಸ್ಸಿನಲ್ಲಿ ಗಾಢವಾಗಿ ಅಚ್ಚೊತ್ತಿತ್ತು. ಬೀಜರೂಪವಾಗಿ ಬಂದ ಈ ಪ್ರವೃತ್ತಿ ಮುಂದೆ ಬೃಹದಾಕಾರವಾದ ವೃಕ್ಷವಾಗಿ ಬೆಳೆದು ಸರ್ವತೋ ಮುಖಿ ಸಮಾಜ ಸೇವೆಗೆ ನಾಂದಿಯಾಯಿತು.

ಈ ಹೋಲ್ಡ್ಸ್‌ವರ್ತ್ ಉಪಾಧ್ಯಾಯರು ಸುಬ್ಬರಾಯರಿಗೆ ವಿದ್ಯಾರ್ಥಿ ವೇತನ ದೊರೆಯುವಂತೆ ಸಹಾಯ ಮಾಡಿದರು. ಈ ಪಾದ್ರಿಯವರ ಹೆಸರಿನಲ್ಲಿ "Holdsworth Memorial Hospital" ಎಂಬ ವೈದ್ಯಕೀಯ ಸಂಘವೂ ಆಸ್ಪತ್ರೆಯೂ ಇದೆ. ಸುಬ್ಬರಾಯರ ಸಹಪಾಠಿಗಳಲ್ಲಿ ಮುಖ್ಯರಾದವರು ದಿ|| ಅಶ್ವಥನಾರಾಯಣ ಶ್ರೇಷ್ಠಿಯವರು, ಎಂ.ಎಸ್,ರಾಮಚಂದ್ರರಾಯರು, ದಿ|| ತಂಬೂಚೆಟ್ಟಿಗಳು. ಸುಬ್ಬರಾಯರ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗವು ಮೈಸೂರಿನಲ್ಲಿಯೇ ಮುಂದುವರೆಯಿತು. ಸುಬ್ಬರಾಯರು ಪ್ರತಿ ತರಗತಿಯಲ್ಲಿಯೂ ಪ್ರಥಮಸ್ಥಾನದಲ್ಲಿಯೇ ತೇರ್ಗಡೆಯಾಗಿ ವಿದ್ಯಾಭ್ಯಾಸ ಮುಂದುವರೆಸಿದರು.

ಸುಬ್ಬರಾಯರ ಮುಂದಿನ ವ್ಯಾಸಂಗ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ, ಶಾಲೆಯಲ್ಲಿಯೇ ಪಡೆದಿದ್ದ ವಿದ್ಯಾರ್ಥಿ ವೇತನವು, ಅವರು ಪಡೆಯುತ್ತಿದ್ದ ಪ್ರಥಮ ಶ್ರೇಣಿಯಿಂದ, ಮುಂದುವರೆದುಕೊಂಡು ಹೋಗಲು ಯಾವ ಬಾಧಕವೂ ಆಗಲಿಲ್ಲ. 1895 ರಿಂದ 1898 ರ ವರೆಗೂ ಸೆಂಟ್ರಲ್ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ.ಎ. ಪದವೀಧರರಾದರು. ಬಿ.ಎ ಪದವಿಗೆ ಅವರು ಆರಿಸಿಕೊಂಡ ವಿಷಯ ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರಗಳು. ಜೊತೆಗೆ ಕಡ್ಡಾಯವಾಗಿದ್ದ ಇಂಗ್ಲೀಷ್, ಕನ್ನಡ ಭಾಷೆಗಳು. ಈ ಕಾಲದಲ್ಲಿ ಸುಬ್ಬರಾಯರ ಮೇಲೆ ಅತ್ಯಂತ ಪ್ರಭಾವ ಬೀರಿದವರೆಂದರೆ Tait ಎಂಬ ಆಂಗ್ಲ ಪ್ರಾಧ್ಯಾಪಕರು. ಅವರು ಕಾಲೇಜಿನ ಪ್ರಾಂಶುಪಾಲರಾಗಿದ್ದರೂ, ಸುಬ್ಬರಾಯರು ಬಿ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಚಿನ್ನದ ಪದಕ ಪಡೆದರು.

ಬಿ.ಎ. ವ್ಯಾಸಂಗವಾಗುತ್ತಿದ್ದಾಗಲೇ ಸುಬ್ಬರಾಯರ ವಿವಾಹ ನಿಶ್ಚಯವಾಯಿತು. ಅನುರೂಪದ ವಧು ವೆಂಕಟಲಕ್ಷ್ಮಮ್ಮನವರು. ಮೈಸೂರಿನ ಅರಮನೆಯಲ್ಲಿ ಶಿರಸ್ತೇದಾರರಾಗಿ ಕೆಲಸ ಮಾಡುತ್ತಿದ್ದ ಎಂ.ವಿ.ಸುಬ್ಬರಾವ್‌ರವರ ಜ್ಯೇಷ್ಠ ಪುತ್ರಿ, ಆಗಿನಕಾಲಕ್ಕೆ ಹೋಲಿಸಿದರೆ ತಕ್ಕ ಮಟ್ಟಿಗೆ ವಿದ್ಯಾವಂತರಾಗಿದ್ದರು. ಕನ್ನಡ ಸಂಸ್ಕೃತ ಚೆನ್ನಾಗಿ ಬಲ್ಲವರಾಗಿದ್ದರು. ಗಾಯನಕ್ಕೆ ಸಂಗೀತ, ನುಡಿಸಲು ವೀಣೆ ಎರಡನ್ನೂ

ಕಲಿತಿದ್ದರು. ವೆಂಕಟಲಕ್ಷ್ಮಮ್ಮನವರಿಗೆ ಒಬ್ಬತಂಗಿ ಒಬ್ಬ ತಮ್ಮ ಇದ್ದರು. ಅವರ ತಂದೆ ಸುಬ್ಬರಾಯರು ಮೈಸೂರಿನಲ್ಲಿ "ಸತ್ಯವಾದಿ" ಎಂಬ ಪತ್ರಿಕೆಯನ್ನು ಸ್ಥಾಪಿಸಿ ಮುಂದೆ ಅದರ ಜವಾಬ್ದಾರಿಯನ್ನು ಅವರ ಮಗನಾದ ಎಂ.ಎಸ್. ಕೃಷ್ಣರಾಯರಿಗೆ ವಹಿಸಿಕೊಟ್ಟರು. ಮೈಸೂರಿನ ಚಾಮರಾಜ ಮೊಹಲ್ಲದಲ್ಲಿ "ಸತ್ಯವಾದಿ ಪ್ರಸ್" ಎಂದೇ ಪ್ರಸಿದ್ಧವಾಗಿತ್ತು ಅದರ ಮುದ್ರಣಾಲಯ.

ಡಾ॥ ಸುಬ್ಬರಾಯರು ಬಿ.ಎ. ಪದವೀಧರರಾದ ಮೇಲೆ ಅಂದು ಮೈಸೂರು ಸಂಸ್ಥಾನದಲ್ಲಿ ಮೆಡಿಕಲ್ ಕಾಲೇಜು ಇಲ್ಲವಾದ್ದರಿಂದ ಮದ್ರಾಸಿನ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ವ್ಯಾಸಂಗ ಮುಂದುವರೆಸಿದರು. ಇದಕ್ಕೆ ಸಹಾಯ ದಿವಾನ್ ಪೂರ್ಣ ರಾಘವೇಂದ್ರರಾಯರಿಂದ ಆಯಿತು. ಅವರ ಪ್ರಭಾವದಿಂದ ಮೈಸೂರಿನ ಅರಮನೆಯವರ ಮೂಲಕ ವಿದ್ಯಾರ್ಥಿವೇತನ ದೊರಕಿತು. ಅವರ ವೈದ್ಯಕೀಯ ಶಿಕ್ಷಣ 1903–04ರಲ್ಲಿ ಸಮಾಪ್ತಿಗೊಂಡಿತು. ಅವರಿಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಪ್ರತಿಷ್ಠಿತ "ಜಾನ್‌ಸ್ಟನ್" ಪದಕ ದೊರೆಯಿತು. ಪ್ರಥಮ ಶ್ರೇಣಿಯಲ್ಲಿಯೇ ವೈದ್ಯಕೀಯ ಪದವಿಯನ್ನು ಪಡೆದರು. ಮದ್ರಾಸಿನಲ್ಲಿ ಇವರ ಸಂಗಡಿಗರಲ್ಲಿ ಡಾ॥ ಟಿ.ಬಾಲಕೃಷ್ಣ, ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್, ಡಾ॥ಕೆ.ರಾಘವೇಂದ್ರರಾವ್, ಡಾ॥ ಬಿ. ನಂಜಪ್ಪನವರೇ ಮೊದಲಾದವರು ಮುಖ್ಯರಾದವರು. ವೈದ್ಯಕೀಯ ವ್ಯಾಸಂಗವಾದಮೇಲೆ ಡಾ॥ ಸುಬ್ಬರಾಯರು ವೈದ್ಯಕೀಯ ವೃತ್ತಿಯನ್ನು ಕೈಗೊಂಡು ಕೆಲಕಾಲ ಸೇವೆ ಸಲ್ಲಿಸಿದರು. ಅದಕ್ಕೂ ಕೌಟುಂಬಿಕ ಸನ್ನಿವೇಶವೇ ಕಾರಣವಗಿತ್ತು ಓದುತ್ತಿದ್ದ ಸಹೋದರರು, ವೃದ್ಧರಾಗಿದ್ದ ತಂದೆ ತಾಯಿಗಳಿಗೆ ಆರ್ಥಿಕ ಸಹಾಯ ಅತ್ಯಂತ ಅವಶ್ಯಕವಾಗಿತ್ತು.

ಸಂಸ್ಥಾನದಲ್ಲಿ ಇದ್ದ ಪರಿಣಿತ ವೈದ್ಯರ ಕೊರತೆಯಿಂದಾಗಿ ಸಹಸ್ರಾರು ಮಂದಿ ಸರಿಯಾದ ವೈದ್ಯಕೀಯವಿಲ್ಲದೇ ನರಳುತ್ತಿದ್ದುದು, ಇವರ ಮನಸ್ಸನ್ನು ಕಲಕಿತು. ವಿದೇಶದಲ್ಲಿ ಇನ್ನೂ ಹೆಚ್ಚಿನ ವ್ಯಾಸಂಗವನ್ನು ಮುಂದುವರೆಸಿ ವಾಪಸ್ಸಾಗಿ, ಈ ಸಂಸ್ಥಾನಕ್ಕೆ ಹೆಚ್ಚಿನ ಸಹಾಯ ಮಾಡಬೇಕೆಂದು ಅವರ ಮನಸ್ಸು ತುಡಿಯುತ್ತಿತ್ತು. ಇದಕ್ಕೆ ಪೂರಕವಾಗಿಯೋ ಎಂಬಂತೆ 1908ರಲ್ಲಿ ಅವರಿಗೆ ದಾಮೋದರ್‌ದಾಸ್

ವಿದ್ಯಾರ್ಥಿ ವೇತನ ದೊರೆತು ಇಂಗ್ಲೇಂಡಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಸಹಾಯವಾಯಿತು. ಇಂಗ್ಲೆಂಡಿಗೆ ತೆರಳಲು ಅವರ ತಂದೆ ತಾಯಿಗಳ ಪೂರ್ಣ ವಿರೋಧವಿದ್ದಿತು. ಸ್ವತಃ ಮಹಾರಾಜರೇ ಅವರ ತಂದೆಯವರನ್ನು ಒಪ್ಪಿಸಿದರು. ಸಂಪ್ರದಾಯಸ್ಥರಾದ ಮಾತಾಪಿತೃಗಳು, ಹತ್ತಿರ ಸಂಬಂಧಿಗಳಿಂದ, ಇಷ್ಟ ಮಿತ್ರರಿಂದ, ಆಪ್ತರಿಂದ ಬಹಿಷ್ಕಾರಕ್ಕೆ ಒಳಗಾಗಲು ಇಷ್ಟಪಡಲಿಲ್ಲ. ಆಗಿನ ಕಾಲದಲ್ಲಿ "ವಿದೇಶಯಾತ್ರೆ" ಮಾಡಿ ಬಂದವರೆಂದರೆ ಬಹಿಷ್ಕಾರಕ್ಕೆ ಒಳಗಾಗಬೇಕಾಗಿತ್ತು. ಆದರೆ ಅದಕ್ಕೆ ಒಂದು ವಿಮೋಚನಾ ಮಾರ್ಗವೂ ಇದ್ದಿತು. ವಿದೇಶಕ್ಕೆ ಹೋಗಿಬಂದಮೇಲೆ ಸಂಪ್ರದಾಯ ಬದ್ಧವಾಗಿ ಪ್ರಾಯಶ್ಚಿತ್ತ ಕಾರ್ಯವನ್ನು ಮಾಡಿಕೊಂಡಮೇಲೆ ಎಲ್ಲರೂ ಅವರನ್ನು ಪುನಃ ಪುರಸ್ಕರಿಸುತ್ತಿದ್ದರು. ಅವರ ತಂದೆತಾಯಿಗಳು, ಮಹಾರಾಜರ ಆದೇಶದ ಮೇಲೆ ಪೂರ್ಣ ರಾಘವೇಂದ್ರರಾಯರ ಪ್ರೀತಿ ಪೂರ್ವಕ ಒತ್ತಾಯದಿಂದಲೂ, ಮಗನ ಮುಂದಿನ ಭವಿಷ್ಯ ಭವ್ಯವಾಗುವುದೆಂಬ ಆಶ್ವಾಸನೆಯಿಂದಲೂ, ಒಪ್ಪಿಗೆ ಕೊಟ್ಟರು. ಸುಬ್ಬರಾಯರಾದರೋ, ತಂದೆ ತಾಯಿಗಳಿಗೆ ಹಿಂತಿರುಗಿ ಬಂದಮೇಲೆ ಪ್ರಾಯಶ್ಚಿತ್ತ ಮಾಡಿಕೊಳ್ಳುವೆನೆಂದು ಮಾತು ಕೊಟ್ಟು ವಿದೇಶಯಾತ್ರೆ ಕೈಕೊಂಡರು. ಇದಕ್ಕೆ ಅವರಿಗಿದ್ದ ದೇಶಾಭಿಮಾನ, ಬಡಜನರಲ್ಲಿದ್ದ ಕಳಕಳಿ, ಮುಂದುವರೆದ ವೈದ್ಯಕೀಯ ಜ್ಞಾನ ಪಡೆದು ಜನಸೇವೆ ಮಾಡಬೇಕೆಂಬ ದೃಢನಿರ್ಧಾರಗಳೇ ಕಾರಣ.

1908ರಲ್ಲಿ ಇಂಗ್ಲೇಂಡಿಗೆ ಹೊರಟ ಸುಬ್ಬರಾಯರು ಲಂಡನ್ ವಿಶ್ವವಿದ್ಯಾಲಯದ "ರಾಯಲ್ ಕಾಲೇಜ್ ಆಫ್ ಸರ್ಜನ್ಸ್" ನಲ್ಲಿ ವ್ಯಾಸಂಗ ಮುಂದುವರೆಸಿ 1910ರಲ್ಲಿ ಎಲ್.ಆರ್.ಸಿ.ಪಿ (LRCP) ಎಂ.ಆರ್.ಸಿ.ಎಸ್. (MRCS) ಪದವಿಗಳನ್ನು ಯಶಸ್ವಿಯಾಗಿ ಪಡೆದರು. ಹಾಗೆಯೇ ಕೇಂಬ್ರಿಡ್ಜ್‌ನಲ್ಲಿ (DPH) ಪದವಿಯನ್ನು ಪಡೆದರು.

ಲಂಡನ್‌ನಲ್ಲಿಯೇ ಕೆಲಕಾಲ ನೆಲೆಸಿದ್ದು ಅಲ್ಲಿದ್ದ ಪ್ರಸಿದ್ಧ ಆಸ್ಪತ್ರೆಗಳಿಗೆ ಭೇಟಿನೀಡಿ ತಮ್ಮ ವೃತ್ತಿಗೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಪಡೆದುಕೊಂಡರು. ಲಂಡನ್‌ನಲ್ಲಿ ಅವರ ಜೊತೆಗಿದ್ದ ಭಾರತೀಯರಲ್ಲಿ

ಕೆಲವು ಪ್ರಸಿದ್ಧ ವ್ಯಕ್ತಿಗಳೆಂದರೆ ಡಾ॥ ದಲಾಲ್ ಅನ್ಸಾರಿ, ಡಾ॥ ಮುಲ್ಗಾಂವ್‌ಕರ್, ಬಿದಾನ್ ಚಂದ್ರರಾಯ್, ಮೈಸೂರಿನವರೇ ಆದ ಡಾ॥ ರಂಗರಾವ್ ಮತ್ತು ಡಾ॥ ಅಮೃತ್‌ರಾಜ್ ಮುಖ್ಯರು.

ವೈದ್ಯಕೀಯ ವೃತ್ತಿ ಜೀವನ:

ಡಾ॥ ಸುಬ್ಬರಾಯರು 1910ರಲ್ಲಿ ಸ್ವದೇಶಕ್ಕೆ ಹಿಂತಿರುಗಿ ಬಂದರು. ಮೈಸೂರು ಸರ್ಕಾರದ ವೈದ್ಯಕೀಯ ಇಲಾಖೆಯಲ್ಲಿ ಅಸಿಸ್ಟೆಂಟ್ ಸರ್ಜನ್ನರಾಗಿ ಕೆಲಸಕ್ಕೆ ಸೇರಿಕೊಂಡರು. ಈ ಮಧ್ಯದಲ್ಲಿ ಆಗಿನ ಕಾಲದ ಮಡಿವಂತರ ಉಪಟಳ ಜಾಸ್ತಿಯಾಯಿತು. ಬಹಿಷ್ಕಾರಕ್ಕೆ ಒಳಗಾಗಬೇಕಾಯಿತು. "ಲಂಡನ್ ಪಾರ್ಟಿ" ಎಂಬ ಬಿರುದು ಹಣೆಪಟ್ಟಿಗೆ ಸೇರಿಕೊಂಡಿತು. ಅವರ ಮಡಿವಂತ ಬಂಧುಗಳು ಇವರ ಜೊತೆಗೆ "ಸಹಪಂಕ್ತಿ' ಭೋಜನವನ್ನು ನಿರಾಕರಿಸುತ್ತಿದ್ದರು. ಇದು ಅವರ ತಂದೆ ತಾಯಿಗಳಿಗೆ ಮನೋವೇದನೆಗೆ ಕಾರಣವಾಯಿತು.

ಒಂದು ಶತಮಾನದ ಹಿಂದೆ ಹಿಂದೂ ಸಮಾಜ 'ಸಮುದ್ರಯಾನ' ಮಾಡಿ ಬಂದವರ ವಿಚಾರದಲ್ಲಿ ಹೇಗೆ ವರ್ತಿಸುತ್ತಿತ್ತು ಎಂಬುದರ ಸವಿವರಣೆ ದಿ॥ ಎ.ಎನ್.ಮೂರ್ತಿರಾಯರ 'ಸಂಜೆಗಣ್ಣಿನ ಹಿನ್ನೋಟ' ಎಂಬ ಅವರ ಆತ್ಮಕಥೆಯಲ್ಲಿ ದೊರೆಯುತ್ತದೆ. (ಪುಟ-59-61) ಸುಬ್ಬರಾಯರು ಇಂಗ್ಲೆಂಡಿನಿಂದ ಹಿಂತಿರುಗಿ ಬಂದಮೇಲೆ 'ಬಹಿಷ್ಕಾರದ' ದ ಸುದ್ದಿ ಮನೆ ಮಾತಾಗಿತ್ತು. ಇದನ್ನು ನಿವಾರಿಸಲು ಅಕ್ಕಿಹೆಬ್ಬಾಳಿನ ಜನ ರೂಪಿಸಿದ ಉಪಾಯವೂ ಇದರಲ್ಲಿ ಸೂಚಿತವಾಗಿದೆ :

"ಮೈಲಿಗೆಯ ಇನ್ನೊಂದು ವಿಶಿಷ್ಟರೂಪವೆಂದರೆ ವಿಲಾಯತಿಗೆ-ಅಂದರೆ ಸಮುದ್ರವನ್ನು ದಾಟಿ ಇಂಗ್ಲೆಂಡ್ ಮುಂತಾದ ಪರದೇಶಗಳಿಗೆ-ಹೋಗಿ ಬಂದವರ ಸಂಪರ್ಕದಿಂದಾಗುವ ಮೈಲಿಗೆ. ನನಗೆ 16-17 ವರ್ಷವಾಗುವ' ವೇಳೆಗೇ ಈ ಮೈಲಿಗೆಯ ಕಲ್ಪನೆ-ಅದೃಶ್ಯವಾಗಿರಲಿಲ್ಲ- ಮಾಸಲಾಗಿತ್ತು. ಇದೂ ಅಕ್ಕಿಹೆಬ್ಬಾಳಿಗೆ ಸೀಮಿತವಾದದ್ದಲ್ಲ. ಮೈಸೂರು ಬೆಂಗಳೂರುಗಳಲ್ಲಿದ್ದವರೂ ಇದರ ಕೋಟಲೆಯನ್ನು ಅನುಭವಿಸಿದ್ದರು. ನನಗೆ ತಿಳಿದ ಮಟ್ಟಿಗೆ ವಿಲಾಯತಿಗೆ

ಹೋಗಿದ್ದವರನ್ನು ಮುಟ್ಟಿದರೆ ಮೈಲಿಗೆ ಎಂಬ ಭಾವನೆಯಿರಲಿಲ್ಲ. ಆದರೆ ಅವರೊಡನೆ ಸವ್ಯವಹಾರ ಕೂಡದು. ಸವ್ಯವಹಾರ ಎಂದರೆ: ಅವರೊಡನೆ ಸಹಪಂಕ್ತಿ ಭೋಜನ; ಅವರ ಮನೆಗೆ ಪುರೋಹಿತರು ಹೋಗಿ ಶ್ರಾದ್ಧ ಇತ್ಯಾದಿ ಕರ್ಮಗಳನ್ನು (ಅವನ್ನು ಮಾಡದಿದ್ದರೆ ಬ್ರಾಹ್ಮಣ್ಯಕ್ಕೇ ಲೋಪ ಬರುತ್ತದೆಯಷ್ಟೆ) ಮಾಡಿಸುವುದು; ಅವರೊಡನೆ ಹೆಣ್ಣು ಕೊಟ್ಟುತರುವ ಸಂಬಂಧವನ್ನು ಬೆಳೆಸುವುದು, ಇವೆಲ್ಲ ನಿಷಿದ್ಧ. ಆಗಿನ ಕಾಲದಲ್ಲಿ ಗಂಡಸರಿಗೆ 15–16 ವರ್ಷಕ್ಕೆ ಮದುವೆ ಮಾಡುವುದು ಅಪರೂಪವೇನಲ್ಲ, ಮದುವೆಯಾದ ಮೇಲೆ ಆ ಗಂಡು ಲಂಡನ್ನಿಗೆ– ಆ ಕಾಲದಲ್ಲಿ ಲಂಡನ್ನೇ ಮಹತ್ವಾಕಾಂಕ್ಷಿಗಳ ಪುಣ್ಯಕ್ಷೇತ್ರ–ಹೋಗಿ ಬಂದರೆ ಅವನ ಹೆಂಡತಿ ಅವನೊಡನೆ ಸವ್ಯವಹಾರ ಇಟ್ಟುಕೊಳ್ಳಬಹುದು; ಅವನ ಅತ್ತೆ ಮಾವಂದಿರು ಅವನ ಮನೆಗೆ ಹೋಗಿಬಂದು ಮಾಡಬಹುದು, ಅಕ್ಕಿಹೆಬ್ಬಾಳಿನವರ ಔದಾರ್ಯ ಅಲ್ಲಿಯವರೆಗೂ ಹೋಯಿತು. ಆದರೆ ಅವನ ಪಂಕ್ತಿಯಲ್ಲಿ ಕೂತು ಊಟ ಮಾಡಬಾರದು. ಉಳಿದಂತೆ, ಸಮುದ್ರಯಾನ ಮಾಡಿ ಬಂದವರೊಡನೆ ಊಟಮಾಡಿದವನೂ ಸವ್ಯವಹಾರಕ್ಕೆ ಯೋಗ್ಯನಲ್ಲ. ಅಂಥ ಜನರಿಗೆಲ್ಲ 'ಲಂಡನ್ ಪಾರ್ಟಿ' ಎಂಬ ತಲೆಚೀಟಿ ಅಂಟಿಸಿದ್ದರು.

ಆಗ ವಿದೇಶಕ್ಕೆ ಹೋಗುತ್ತಿದ್ದವರು ಅಪರೂಪ. ಹೊಯ್ಸಳ ಕರ್ಣಾಟಕ (ಹೊ.ಕ)ರಲ್ಲದ ಕೆಲವರು ಆಗಲೇ ಹೋಗಿಬಂದಿದ್ದರು. ಅವರೇನೂ ಹೊ.ಕ ಅಲ್ಲ ಎಂಬ ಕಾರಣಕ್ಕಾಗಿಯೇ ಭ್ರಷ್ಟರು !–ಸವ್ಯವಹಾರಯೋಗ್ಯರಲ್ಲ; ಅಂದಮೇಲೆ ಅವರು ಲಂಡನ್ನಿಗೆ ಹೋದರೇನು ಬಿಟ್ಟರೇನು! ಆದರೆ ಹೊ.ಕ.ಗಳೇ ಹೋಗಿ ಬಂದರೆ? ನೆಚ್ಚಿದ ಎಮ್ಮೆಯೇ ಕೋಣನನ್ನು ಈಯ್ದುಬಿಟ್ಟರೆ? ಈ ಭಯಂಕರ ಅನಾಹುತ ಸಂಭವಿಸಿಯೇ ಬಿಟ್ಟಿತು. "ಕೇಳಿದೆಯೇನೋ ಕಿಟ್ಟಿ? ಯಾರೋ ಡಿ.ವಿ.ಅಯ್ಯನಂತೆ. ಬೆಂಗಳೂರಿನವರು, ಹೊ.ಕ. ಲಂಡನ್ನಿಗೆ ಹೋಗಿದ್ದನಂತೆ. ನಮ್ಮ ಪಾಲಹಳ್ಳಿ ನರಸುಂವನ' (ನರಸಿಂಹನ) ಬೀಗರು ಅವನ ಮನೆಗೆ ಹೋಗಿದ್ದರಂತೆ" ಇತ್ಯಾದಿ ಮಾತುಗಳು ಕೇಳಿಬರಲಾರಂಭಿಸಿದವು ಇದಾದ ಕೆಲವು ದಿನಗಳಲ್ಲೇ ವಿಪತ್ತು ಇನ್ನೂ ಹತ್ತಿರ ಬಂತು. ಅಕ್ಕಿಹೆಬ್ಬಾಳು ಬುಡಕಟ್ಟಿಗೆ

ಸೇರಿದವರೇ ಒಬ್ಬರು ಹೊ. ಕರ್ನಾಟಕರ ಧವಳಕೀರ್ತಿಯ ಮೇಲೆ ಮಸಿ ಬಳಿದುಬಿಟ್ಟರು-ಎಸ್.ಸುಬ್ಬರಾಯರು ಇಂಗ್ಲೆಂಡಿಗೆ ಹೋಗಿ ಎಫ್.ಆರ್.ಸಿ.ಎಸ್. ಡಿಗ್ರಿ ಪಡೆದುಕೊಂಡು ಹಿಂದಿರುಗಿದರು. ಮೊದಮೊದಲು ಈ ಪಾಪಕ್ಕೆ ಪ್ರಯಶ್ಚಿತ್ತವೇ ಇರಲಿಲ್ಲವಂತೆ. ಕಲಿಯುಗದಲ್ಲಿ ಪ್ರಪಂಚ ಎಲ್ಲ ರೀತಿಯಲ್ಲೂ ಕೆಟ್ಟಂತೆ ಈ ವಿಷಯದಲ್ಲೂ ಕೆಟ್ಟಿತು.-ಲಂಡನ್ ಪಾರ್ಟಿಯವರಿಗೆ ಪ್ರಾಯಶ್ಚಿತ್ತವೊಂದು ಏರ್ಪಟ್ಟಿತು. ಸುಬ್ಬರಾಯರು ಪ್ರಾಯಶ್ಚಿತ್ತ ಮಾಡಿಕೊಳ್ಳುವುದಿಲ್ಲ ಎಂದುಬಿಟ್ಟರಂತೆ; ಒಪ್ಪಿದರು, ಮಾಡಿಕೊಂಡರು ಎಂದು ಪಾಠಾಂತರವುಂಟು. ಅದು ಹೇಗಾದರೂ ಆಗಲಿ, ಅವರು ಸರ್ಕಾರದ ವೈದ್ಯಶಾಖೆಯಲ್ಲಿ ಬಹುಬೇಗ ದೊಡ್ಡ ಹುದ್ದೆಗಳಿಗೆ ಏರಿ 'ಸೀನಿಯರ್ ಸರ್ಜನ್' (ಇಂದು ಆ ಹುದ್ದೆಯ ಹೆಸರು 'ವೈದ್ಯ ಶಾಖೆಯ ಡೈರೆಕ್ಟರು') ಆಗಿಬಿಟ್ಟರು. ನಮ್ಮೂರಿನವರಿಗೆ ಧರ್ಮಸಂಕಟ. ಏನು ಮಾಡಬೇಕೋ ತೋರದು. ಲಂಡನ್ನಿಗೆ ಹೋಗಿ ಬಂದವನೆಂದರೆ ಜಾತಿಕೆಟ್ಟವನು. ಈ ವಿಷಯದಲ್ಲಿ ಸಂದೇಹಕ್ಕೆ ಅವಕಾಶವಿಲ್ಲ. ಆದರೆ ಈ ಸುಬ್ಬರಾಯ 1400 ರೂಪಾಯಿ ಸಂಬಳದ ಸರದಾರ, ಪ್ರಭಾವಶಾಲಿ! ಹೆಬ್ಬಾರಿ, ಜುಟ್ಟಿನ ಕಿಟ್ಟ, ದೊಟ್ಟಹಟ್ಟಿಶಾಮ, ಅಪ್ಪಾಶಾಮಿ ನರಸುಂವ, ಕೃಷ್ಣಜೋಯಿಸರು, ಮುಂತಾದ ಸಮಸ್ತರೆಲ್ಲ ಸಭೆ ಸೇರಿ ಸಮಸ್ಯೆಯ ಪರಿಶೀಲನೆ ಮಾಡಿದರು; ಅನುಕೂಲ ಸಿಂಧುವಿನ ನೆರವು ಪಡೆದು ದಿಗ್ದರ್ಶಕವಾದ ನಿರ್ಣಯಕ್ಕೆ ಬಂದರು : "ಸುಬ್ಬರಾಯರು ಸಮುದ್ರಯಾನ ಮಾಡಿದ್ದು ತಪ್ಪು. ಆದರೆ ಈಗ ಅವರು ದೊಡ್ಡ ಹುದ್ದೆಯಲ್ಲಿದ್ದಾರೆ. ಶ್ರೀಮಂತರಾಗಿದ್ದಾರೆ. ಲಕ್ಷ್ಮಿಯ ಕಟಾಕ್ಷ ಅವರ ಮೇಲೆ ಬಿದ್ದಿದೆ ಎಂದು ತಾನೆ ಇದರ ಅರ್ಥ? ಲಕ್ಷ್ಮಿಯೇ ಅನುಗ್ರಹಿಸಿದವರನ್ನು ಸವ್ಯವಹಾರಕ್ಕೆ ಸೇರಿಸಬಾರದು ಎನ್ನುವುದಕ್ಕೆ ನಾವು ಯಾವೂರಿನ ದಾಸಯ್ಯ! ಆದರೂ ಪ್ರಾಯಶ್ಚಿತ್ತ ನಡೆಯಲೇಬೇಕು. ಅವರ ತಲೆಯ ಮೇಲೆ ದೇವರ ತೀರ್ಥವನ್ನು ಪ್ರೋಕ್ಷಿಸಿ ಬಿಡೋಣ-ಎಂಥ ಪಾಪವಾದರೂ ಭಸ್ಮವಾಗಿಬಿಡುತ್ತೆ" ಈ ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು. ತಮ್ಮ ಮೇಲೆ ತೂಗಾಡುತ್ತಿದ್ದ ಬಹಿಷ್ಕಾರದ ಕತ್ತಿಯನ್ನು ಅಕ್ಕಿಹೆಬ್ಬಾಳಿನವರು ಹೇಗೆ ನಿವಾರಿಸಿದರೆಂಬುದು ಡಾಕ್ಟರ್ ಸುಬ್ಬರಾಯರಿಗೆ ತಿಳಿಯಿತೋ ಇಲ್ಲವೋ

ಕಾಣೆ. ಅಂತೂ ಅವರು ಅಕ್ಕಿ ಹೆಬ್ಬಾಳಿನಲ್ಲಿ ತಮ್ಮ ಸ್ವಂತ ಖರ್ಚಿನಿಂದ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟರು: ಊರಿನವರೆಲ್ಲರ ವಿಶ್ವಾಸಕ್ಕೂ ಪಾತ್ರರಾದರು".

ತಂದೆತಾಯಿಗಳ ಮನವಿಯಿಂದಲೂ, ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳ ಮುಂದಾಳತ್ವದಲ್ಲಿ ನಡೆಸಿದ ರಾಯಭಾರದಿಂದಲೂ, ಶೃಂಗೇರಿ ಮಠದವರು ಈ ಬಹಿಷ್ಕಾರವನ್ನು ಪ್ರಾಯಶ್ಚಿತ್ತದ ಮೂಲಕ ಬಗೆಹರಿಸಿದರು. "ಬಡಜನರ ಸೇವೆಯೇ ಜನಾರ್ದನಸೇವೆ" ಎಂದು ನಂಬಿದ್ದ ಸುಬ್ಬರಾಯರು ಈ ಘಟನೆಗಳಿಂದ ಸ್ವಲ್ಪವೂ ವಿಚಲಿತರಾಗಲಿಲ್ಲ. ಎಂದಿನಂತೆ ತಮ್ಮ ನಿಸ್ಪೃಹ ಸೇವೆಯನ್ನು ಮುಂದುವರೆಸಿಕೊಂಡು ಹೋದರು. ವಿದೇಶಯಾತ್ರೆಯಿಂದ ಸ್ವಂತಜೀವನಕ್ಕೆ ಕೊಂಚ ತೊಂದರೆಯಾಗಿದ್ದು ನಿಜ. ಆದರೆ ಅದರಿಂದ ಎದೆಗುಂದದೇ, ವಿದೇಶೀ ಜೀವನದ ವೈಭವಕ್ಕೆ ಮರುಳಾಗದೇ, ತಮ್ಮ ದೇಶದ ಬಡಜನರ ಸೇವೆಯೇ ಪ್ರಮುಖವೆಂದು ಭಾವಿಸಿ ಅದರಲ್ಲಿಯೇ ತಮ್ಮ ಇಡೀ ಜೀವನವನ್ನು ಸವೆಸಿದವರು ಶ್ರೀ ಸುಬ್ಬರಾಯರು. ತಂದೆತಾಯಿಗಳ ಪ್ರೀತ್ಯರ್ಥವಾಗಿ ರಾಮೇಶ್ವರಕ್ಕೂ ಸಂಸಾರ ಸಮೇತ ಹೋಗಿಬಂದರು. ದೀನರ ಸೇವೆಗೆ ಮತ್ತಷ್ಟು ಪುಷ್ಟಿಕೊಟ್ಟಿತು ಈ ಘಟನೆಗಳು.

ಇಂಗ್ಲೇಂಡಿಗೆ ವಿದ್ಯಾಭ್ಯಾಸಕ್ಕೆ ಹೋಗುವ ಮುಂಚೆಯೇ ಅವರಿಗೆ ಇಬ್ಬರು ಗಂಡುಮಕ್ಕಳ ಭಾಗ್ಯವಾಗಿದ್ದಿತ್ತು. ಮೊದಲನೇ ಮಗ ನರಸಿಂಹಸ್ವಾಮಿ, ಎರಡನೇ ಮಗ ರಾಮಸ್ವಾಮಿ. ಸುಬ್ಬರಾಯರು ವಿದೇಶದಿಂದ ವಾಪಸ್ಸುಬಂದಮೇಲೆ ಮೊದಲನೇ ಮಗ ನರಸಿಂಹಸ್ವಾಮಿಯಯು ವಿಷಮಶೀತಜ್ವರದಿಂದ (Typhoid) ಬಳಲಿ ಕಾಲವಾದನು.

1910 ರಿಂದ 1918ರ ವರೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಅಸಿಸ್ಟೆಂಟ್ ಸರ್ಜನ್ನರಾಗಿಯೂ ನಂತರ RMO (Resident Medical Officer) ಆಗಿಯೂ ಸೇವೆ ಸಲ್ಲಿಸಿದರು. 1911ರಲ್ಲಿ ಅನಂತಸ್ವಾಮಿ ಎಂಬ ಮೂರನೇ ಮಗನ ಜನನವಾಯಿತು. 1914ರಲ್ಲಿ ವಿಶಾಲಾಕ್ಷಿ ಎಂಬ ಮಗಳೂ. 1916ರಲ್ಲಿ ನಾರಾಯಣಸ್ವಾಮಿ ಎಂಬ ಮಗನೂ, 1918ರಲ್ಲಿ ಕೃಷ್ಣಸ್ವಾಮಿ ಎಂಬ ಮಗನೂ

ಜನಿಸಿದರು. ಸುಬ್ಬರಾಯರಿಗೆ 1918ರಲ್ಲಿ ಶಿವಮೊಗ್ಗ ನಗರಕ್ಕೆ ಜಿಲ್ಲಾ ವೈದ್ಯಾಧಿಕಾರಿಯಾಗಿ ವರ್ಗಾವಣೆಯಾಯಿತು. ಅಲ್ಲಿ ಅನೇಕ ಗಣ್ಯ ವ್ಯಕ್ತಿಗಳ ಪರಿಚಯವಾಯಿತು. ಅವರಲ್ಲಿ ಮುಖ್ಯರು ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು,, ಎ. ಅನಂತಯ್ಯನವರು ಮಲ್ಲಿ ಪಟ್ಟಣದ ಸೂರ್ಯನಾರಾಣಪ್ಪನವರು. ಶೇಷ ಶಾಸ್ತ್ರಿಗಳು ಮುಂತಾದವರು.

ಅಲ್ಲಿಂದ ಮುಂದೆ ಅವರಿಗೆ 1920 ರಲ್ಲಿ ಬೆಂಗಳೂರಿಗೆ ವೈದ್ಯಾಧಿಕಾರಿಯಾಗಿ ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾವಣೆಯಾಯಿತು. ಮೊದಲೇ ಶಿಸ್ತಿನ ಸಿಪಾಯಿಯೆಂದು ಹೆಸರು ಪಡೆದಿದ್ದ ಸುಬ್ಬರಾಯರು ಅನೇಕ ಆಡಳಿತ ಬದಲಾವಣೆಗಳನ್ನು ತಂದರು. ಅನೇಕ ನವೀನ ಪದ್ಧತಿಗಳನ್ನು ಜಾರಿಗೆ ತಂದರು. ಇದರಿಂದ ಆಸ್ಪತ್ರೆಗೂ ವೈಯಕ್ತಿಕವಾಗಿ ಅವರಿಗೂ ಯಶಸ್ಸು ತಂದಿತು.

ಈ ಮಧ್ಯೆ ಬೆಂಗಳೂರು ಮೆಡಿಕಲ್ ಸ್ಕೂಲಿಗೆ ಪ್ರಾಂಶುಪಾಲರಾಗಿಯೂ, ಪ್ರೋಫೇಸರ್ ಆಫ್ ಸರ್ಜರಿ (ಶಸ್ತ್ರಚಿಕಿತ್ಸೆಯ ಮುಖ್ಯಸ್ಥರಾಗಿಯಾಗಿ)ಯೂ ಕಾರ್ಯನಿರ್ವಹಿಸಿದರು. ಇವರ ಜೊತೆ ಹೆಗಲು ಕೊಟ್ಟು ದುಡಿದ ಮಹನೀಯರೆಂದರೆ ಡಾ|| ಬಿ.ನಂಜಪ್ಪನವರು, ಡಾ|| ನಾರಾಯಣ ಪ್ರಸಾದ್, ಡಾ|| ಶ್ರೀನಿವಾಸಚಾರ್, ಮತ್ತಿತರು. 1924ರಲ್ಲಿ ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ ಆಗಿ ನೇಮಕಗೊಂಡರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗ ಆಸ್ಪತ್ರೆ ಹೆಚ್ಚು ವಿಸ್ತಾರಗೊಂಡು ಕಿವಿ, ಮೂಗು, ಗಂಟಲು ವಿಭಾಗ (ENT), ಎಕ್ಸರೇ (X-ray) ವಿಭಾಗ ಪ್ಯಾಥೋಲಜಿ ವಿಭಾಗ, ಹೊರರೋಗಿಗಳ ವಿಭಾಗ (OPD) ಗಳು ಪ್ರಾರಂಭವಾದವು.

ಪತ್ನಿ ವಿಯೋಗ :

1922ರಲ್ಲಿ ಆರನೆಯ ಮಗ ಗೋಪಾಲಸ್ವಾಮಿಯ ಜನನವಾಯಿತು. ಸ್ವಲ್ಪಕಾಲದಲ್ಲಿಯೇ ಅವರ ಪ್ರಿಯ ಪತ್ನಿ ವೆಂಕಟಲಕ್ಷಮ್ಮಮ್ಮನವರಿಗೆ ಇನ್‌ಫ್ಲೂಯೆಂಜಾ ರೋಗ ತಗುಲಿತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲಾಗಿ

ಡಾ॥ ಸಂಜಪ್ಪನವರ ಪೂರ್ಣ ಆರೈಕೆಗೆ ಒಳಗಾದರು. ಆದರೆ ಆ ಕಾಲದಲ್ಲಿ ಈ ರೋಗಕ್ಕೆ ನೂತನ ಔಷಧಿಗಳಿರಲಿಲ್ಲ. ಬಹಳದಿನ ಹಾಸಿಗೆ ಹಿಡಿದು ಯಾವುದೇ ಔಷದೋಪಚಾರಕ್ಕೆ ಬಗ್ಗದ ರೋಗ ಅವರನ್ನು ಬಹಳ ನಿತ್ರಾಣರನ್ನಾಗಿ ಮಾಡಿತು. 1923ನೇ ಇಸವಿ ಚೈತ್ರಬಹುಳ ಪಾಡ್ಯಮಿಯಂದು ಶ್ರೀಮತಿ ವೆಂಕಟಲಕ್ಷ್ಮಮ್ಮನವರು ದೈವಾದೀನರಾದರು. ಆಗ ಅವರಿಗೆ ಕೇವಲ 33ವರ್ಷ. ಸುಬ್ಬರಾಯರಿಗೆ ತಡೆಯಲಾಗದ ಆಘಾತ. ಮಕ್ಕಳೆಲ್ಲಾ ಚಿಕ್ಕವರು. ಈಗ ಸಂಸಾರದ ಹೊರೆ ಅವರ ತಂದೆ ಶ್ರೀಕಂಠಯ್ಯನವರ ಮತ್ತು ತಾಯಿ ಪುಟ್ಟಕ್ಕ0ಯ್ಯನವರ ಮೇಲೆ ಬಿದ್ದಿತು. ಆಗ ಸುಬ್ಬರಾಯರಿಗೆ ಸುಮಾರು 40–41 ವರ್ಷಗಳು. ಶ್ರೀಕಂಠಯ್ಯನವರಿಗೆ ವೃದ್ಧಾಪ್ಯ. ಚಿಕ್ಕ ವಯಸ್ಸಿನಲ್ಲೇ ವಿಧುರರಾದ ಸುಬ್ಬರಾಯರು ಪತ್ನಿ ವಿಯೋಗದಿಂದ ಬಹಳ ವ್ಯಥೆಪಟ್ಟರು. ಆದರೆ ಈ ವಿಷಮ ಕಾಲದಲ್ಲಿ ಅವರಿಗೆ ಪೂರ್ಣ ಬೆಂಬಲವಾಗಿ ನಿಂತು ಧೈರ್ಯವನ್ನು ತುಂಬಿದವರು ಪೂರ್ಣರಾಘವೇಂದ್ರರಾಯರು.

ಪುನರ್ವಿವಾಹ:

ತಂದೆ ತಾಯಿಗಳು ಪುನರ್ ವಿವಾಹವಾಗುವಂತೆ ಪದೇ ಪದೇ ಒತ್ತಾಯ ಮಾಡುತ್ತಿದ್ದರು. ಸುಬ್ಬರಾಯರಿಗೆ ಇದು ಸುತರಾಂ ಇಷ್ಟವಿಲ್ಲ. ಕಡೆಗೆ ಪೂರ್ಣ ರಾಘವೇಂದ್ರರಾ0ುರ ಸ್ನೇಹ ಪೂರ್ವಕ ಹಾಗೂ ಮಮತಾ ಪೂರ್ಣ ಒತ್ತಾಯಕ್ಕೆ ಮಣಿದು 1924 ರಲ್ಲಿ ಪುನರ್‌ವಿವಾಹವಾದರು. ಈಗಿನ ಕನ್ಯಾಮಣಿ ಹಾಸನದ ಶ್ರೀಕಂಠಯ್ಯನವರ ಪುತ್ರಿ ಪಾರ್ವತಮ್ಮ. ಇದರಿಂದ ಮೊದಲನೇ ಪತ್ನಿಯ ವಿಯೋಗದಿಂದ ಝಂಜಾಟಕ್ಕೆ ಸಿಲುಕಿದ್ದ ಸಂಸಾರ ನೌಕೆಗೆ ಒಂದು ಗಟ್ಟಿನೆಲೆ ಸಿಕ್ಕಿ ಅವರ ಜೀವನದ ಮುಂದಿನ ಹಾದಿ ಸುಗಮವಾಗಿ ಸಾಗಿತು. ಸುಬ್ಬರಾಯರಿಗೆ ಎರಡನೇ ಪತ್ನಿಯಿಂದ 1926ರಲ್ಲಿ ಒಂದು ಗಂಡುಮಗು, 1928ರಲ್ಲಿ ಒಬ್ಬ ಮಗಳೂ ಜನಿಸಿದರು.

ಇದುವರೆವಿಗೂ ಶಂಕರಪುರದಲ್ಲಿ ವಾಸಿಸುತ್ತಿದ್ದ ಶ್ರೀ ಸುಬ್ಬರಾಯರು ಬಸವನಗುಡಿಯ ವಾಣೀವಿಲಾಸ್ ಸರ್ಕಲ್‌ನಲ್ಲಿದ್ದ ಮನೆಗೆ ವಾಸಸ್ಥಳವನ್ನು

ಬದಲಾಯಿಸಿದರು. 1928-29 ರವರೆಗೂ ಅಲ್ಲಿದ್ದು, ವಿಶ್ವೇಶ್ವರಪುರಂದಲ್ಲಿ ಆಗಿನ ಕನಕಪುರ ರಸ್ತೆಯಲ್ಲಿ (ಈಗ ವಾಸವೀದೇವಸ್ಥಾನದ ರಸ್ತೆ) ಒಂದು ದೊಡ್ಡ ನಿವೇಶನವನ್ನು ಖರೀದಿಸಿ "ಸತ್ಸುಮ" ಎಂಬ ವಿಶಾಲ ಗೃಹವನ್ನು ಕಟ್ಟಿಸಿ ಅದರಲ್ಲಿ ವಾಸಿಸತೊಡಗಿದರು.

1928 ರಲ್ಲಿ ಮಗಳು ವಿಶಾಲಾಕ್ಷಿಯನ್ನು, ಅಯ್ಯಾಶಾಸ್ತ್ರಿಗಳ ಮೊಮ್ಮಗನಾದ ಎಂ.ಎನ್.ರಾಮಸ್ವಾಮಿಗೆ ಕೊಟ್ಟು ವಿವಾಹ ನೆರವೇರಿಸಿದರು. ಮಗನಾದ ಎಸ್.ರಾಮಸ್ವಾಮಿಗೆ ಮೈಸೂರು ಅಡ್ವೊಕೆಟ್ ಕೆ.ರಾಮಸ್ವಾಮಿಯವರ ಮಗಳದ ಮಹಾಲಕ್ಷ್ಮಮ್ಮನವರನ್ನು ತಂದುಕೊಂಡು ವಿವಾಹ ಸಂಬಂಧ ಬೆಳೆಸಿದರು. ಈ ಮದ್ಯೆ ಸುಬ್ಬರಾಯರಿಗೆ ಪಿತೃ ವಿಯೋಗವಾಯಿತು. ಅನಾರೋಗ್ಯದಿಂದ ಬಳಲಿ ಶ್ರೀಕಂಠಯ್ಯನವರು ಸ್ವರ್ಗಸ್ಥರಾದರು. ಅವರಿಗೆ ಆಗ 68 ವರ್ಷಗಳು.

1925 ರಲ್ಲಿ "ಸೀನಿಯರ್ ಸರ್ಜನ್" ಆಗಿ ನೇಮಕಗೊಂಡ ಸುಬ್ಬರಾಯರನ್ನು ಶ್ರೀಮಾನ್ ಮಹಾರಾಜರ ಸ್ವಂತ ಆದೇಶದ ಮೇರೆಗೆ, ಆಗಿನ ಯುವರಾಜರಾಗಿದ್ದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್‌ರವರು ಯೂರೋಪ್ ಪ್ರವಾಸಕ್ಕೆ ಕರೆದೊಯ್ದರು. ಅದೇ ವರ್ಷದ ಕೊನೆಯಲ್ಲಿ ಹಿಂತಿರುಗಿದರು. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಗಳಲ್ಲಿ ನೂತನ ವೈದ್ಯಕೀಯ ಪದ್ಧತಿಗಳನ್ನು ಅಭ್ಯಸಿಸಿ ಅವುಗಳನ್ನು ಸಂಸ್ಥಾನದಲ್ಲಿ ಜಾರಿಗೆ ತಂದರು. "ಸೀನಿಯರ್ ಸರ್ಜನ್" ಹುದ್ದೆಗೆ ಜೊತೆಯಾಗಿ, MGID (ಮೈಸೂರು ಸರ್ಕಾರದ ವಿಮಾ ಇಲಾಖೆ) ಯ ವೈದ್ಯ ತಪಾಸಣಾ ಅಧಿಕಾರಿ ಆಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಇದರ ಜೊತೆಗೆ 'INSPECTOR GENERAL OF PRISONS ಆಗಿಯೂ ಕಾರ್ಯನಿರ್ವಹಿಸುತ್ತಿದ್ದರು. 1925-35ರ ದಶಕದಲ್ಲಿ ಸಂಸ್ಥಾನಾದ್ಯಂತ ನೂರಾರು ವೈದ್ಯಶಾಲೆಗಳನ್ನು (DISPENSARY) ಗಳನ್ನು ಸ್ಥಾಪಿಸಲು ಕಾರಣರಾದರು. ರಾಜ್ಯದ ಜಿಲ್ಲಾ ಮಟ್ಟದ ಆಸ್ಪತ್ರೆಗಳ ಭೇಟಿ ಜೊತೆಗೆ ಅಲ್ಲಿ ಅನೇಕ ಶಸ್ತ್ರಚಿಕಿತ್ಸೆಗಳನ್ನು ಮಾಡಿ ಜನರ ಗೌರವಾದರಗಳಿಗೆ ಪಾತ್ರರಾದರು. ವಿಕ್ಟೋರಿಯಾ

ಆಸ್ಪತ್ರೆಯಲ್ಲಿದ್ದಾಗ ಅನೇಕ ಬಡರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದರೆಂದು ಹಳೆಯ ತಲೆಮಾರಿನವರ ಹೇಳಿಕೆ. ಇವೆಲ್ಲದರ ಜೊತೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೂಕ್ತ ಸಮಯದಲ್ಲಿ ಆಗಿಂದ್ದಾಗ್ಗೆ ಕ್ಲಿಷ್ಟವಾದ ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆಯನ್ನೂ ನಡೆಸುತ್ತಿದ್ದರು ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೂ ಭೇಟಿ ನೀಡುತ್ತಿದ್ದರು.

ಬೆಂಗಳೂರು ಮೆಡಿಕಲ್ ಸ್ಕೂಲಿಗೆ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸುತ್ತದ್ದಾಗ ಅವರ ವಿದ್ಯಾರ್ಥಿಗಳಾಗಿ, ಅವರ ಶಿಸ್ತನ್ನು ಜೀವನದಲ್ಲಿ ಅಳವಡಿಸಿಕೊಂಡು, ಪ್ರತಿಭಾನ್ವಿತ ವೈದ್ಯರಾಗಿ ಹೆಸರು ಪಡೆದವರಲ್ಲಿ ಪ್ರಾಮುಖ್ಯರು ಡಾ|| ಎಂ.ವಿ.ಗೋವಿಂದಸ್ವಾಮಿ, ಡಾ|| ಆರ್.ಶಿವರಾಂ (ರಾ.ಶಿ), ಡಾ|| ಡಿ.ಎ.ಲಕ್ಷ್ಮಣರಾವ್, ಡಾ|| ಬಿ.ಅನಂತಸ್ವಾಮಿರಾವ್ (ಮಲೇರಿಯಾ ನಿರ್ಮೂಲನ ಯೋಜನಾ ನಿರ್ದೇಶಕರು) ಡಾ|| ವೆಂಕಟ ಸುಬ್ಬರಾಯರು (ಹೃದಯರೋಗ ತಜ್ಞರು) ಮುಂತಾದವರು.

ಬೆಂಗಳೂರು ಮೆಡಿಕಲ್ ಸ್ಕೂಲ್‌ನಲ್ಲಿ ಮೆಡಿಕಲ್ ಕಾಲೇಜನ್ನೂ ಸ್ಥಾಪಿಸಿ ಅದರ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೆಡಿಕಲ್ ಆಫೀಸರ್ ಆಗಿದ್ದಾಗ ಇವರಿಗೆ ಡಾ|| ಬಿ. ನಂಜಪ್ಪ ಡಾ|| ಡಿ.ಎಸ್. ಪುಟ್ಟಣ್ಣ, ಡಾ|| ಕೆ. ಶ್ರೀನಿವಾಸಾಚಾರ್, ಡಾ|| ಎಸ್. ಎನ್. ಪ್ರಸಾದ್ ಮುಖ್ಯ ಸಹಾಯಕರಾಗಿದ್ದರು.

ಹೀಗೆ ಸಂಸ್ಥಾನದ ಶ್ರೇಯೋಭಿವೃದ್ಧಿಗೆ ಅವಿರತ ದುಡಿದು ತಮ್ಮ 55 ನೆಯ ವಯಸ್ಸಿನಲ್ಲಿ ನಿವೃತ್ತಿ ಹೊಂದಿದರು. ನಿವೃತ್ತಿ ನಂತರ ಡಾ|| ಶ್ರೀನಿವಾಸಚಾರ್ಯರ ಸಂಗಡ ಸೇಂಟ್ ಮಾರ್ಕ್ಸ್ ರೋಡಿನಲ್ಲಿ ಒಂದು ಪರ್ಯಾಲೋಚನಾ (consultation) ಕ್ಲಿನಿಕ್ ಸ್ಥಾಪಿಸಿ ವೈದ್ಯಕೀಯ ಸೇವೆಯನ್ನು 6–7 ವರ್ಷ ಮುಂದುವರೆಸಿದರು. ಈ ಮಧ್ಯೆ ಉಳಿದ ತಮ್ಮ ಸಹೋದ್ಯೋಗಿಗಳ ಹಾಗೂ

ಉಳಿದ ಗೌರವಾನ್ವಿತ ವೈದ್ಯರ ಸಹಕಾರದಿಂದ "ಮೈಸೂರು ಮೆಡಿಕಲ್ ಅಸೋಸಿಯೇಷನ್" ಹಾಗೂ "ಅಸೋಸಿಯೇಷನ್ ಆಫ್ ಸರ್ಜನ್ಸ್" ಸಂಸ್ಥೆಗಳಿಗೆ ಧನಸಹಾಯನೀಡಿ ಅವುಗಳ ಹುಟ್ಟಿಗೆ ಕಾರಣಕರ್ತರಾದರು.

ಅವರು ಸೀನಿಯರ್ ಸರ್ಜನ್ ಆಗಿದ್ದ ಕಾಲದಲ್ಲಿ, ಬೆಂಗಳೂರಿನಲ್ಲಿ ಮಾನಸಿಕ ರೋಗದ ಆಸ್ಪತ್ರೆ (Mental Hospital) ಅನ್ನು ಸ್ಥಾಪಿಸಲಾಯಿತು. ಇದು ದಕ್ಷಿಣ ಭಾರತದ ಮೊದಲ ಮಾನಸಿಕ ಆಸ್ಪತ್ರೆ. ಈಗ NIMHANS ಆಗಿ ಬೃಹದಾಕಾರವಾಗಿ ಬೆಳೆದಿದೆ. ಇಂದು ಇದು ವಿಶ್ವವಿದ್ಯಾನಿಲಯದ Status ಹೊಂದಿದೆ ಮತ್ತು ಅಂತರ್‌ರಾಷ್ಟ್ರೀಯ ಪ್ರಸಿದ್ಧಿಗಳಿಸಿದೆ. ಇಲ್ಲಿ ಉನ್ನತ ವಿದ್ಯಾಭ್ಯಾಸವನ್ನು ನೀಡಲಾಗುವುದು.

1937ರಲ್ಲಿ ಅಂದಿನ ರಾಜಕುಮಾರರಾಗಿದ್ದ ಜಯಚಾಮರಾಜ ಒಡೆಯರ್‌ರವರು ಜಪಾನ್‌ದೇಶಕ್ಕೆ ಮತ್ತು ಇತರ ಪೂರ್ವ ದೇಶಗಳಿಗೆ ಜ್ಞಾನಾರ್ಜನೆಗಾಗಿ ಸಂಚಾರ ಹೊರಟರು. ಅವರು ಸುಬ್ಬರಾಯರನ್ನು ತಮ್ಮ (Guradian) ಸಂರಕ್ಷಕರಾಗಿ ಜೊತೆಗೆ ಕರೆದೊಯ್ದರು. ಅಲ್ಲಿಯೂ ಸಹ ಅನೇಕ ಆಸ್ಪತ್ರೆಗಳಿಗೆ ಭೇಟಿನೀಡಿ ಅಲ್ಲಿ ಅಳವಡಿಸಲಾಗಿದ್ದ ಪ್ರಾಚೀನ, ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಕುರಿತು ಅಧ್ಯಯನ ನಡೆಸಿದರು.

ರಾಜಕುಮಾರರು ಪಾಶ್ಚಾತ್ಯ ಸಂಗೀತದಲ್ಲಿ ಅಪಾರ ಪರಿಣಿತಿಯನ್ನು ಪಡೆದಿದ್ದರು. ಅವರು ಸಂಚಾರದಲ್ಲಿದ್ದಾಗ ಒಂದು ಕಡೆ ಅವರ ಗೌರವಾರ್ಥವಾಗಿ ಒಂದು ಪಾಶ್ಚಾತ್ಯ ಸಂಗೀತ ಸಭೆಯನ್ನು ಏರ್ಪಡಿಸಲಾಗಿತ್ತು. ಜಯಚಾಮರಾಜ ಒಡೆಯರ್‌ರವರು ಮತ್ತು ಸುಬ್ಬರಾಯರು ಆ ಗೋಷ್ಠಿಯಲ್ಲಿ ಪಿಟೀಲು ವಾದನವನ್ನು ಕೇಳುತ್ತಿರುವಾಗ ಒಂದು ಪಿಟೀಲಿನ ತಂತಿ ಅಪಶ್ರುತಿಯಲ್ಲಿದ್ದುದು ಒಡೆಯರ್‌ರವರ ಗಮನ ಸೆಳೆಯಿತು. ಕರ್ಣ ಕಠೋರವಾಗಿದ್ದ ಆ ಅಪಸ್ವರವನ್ನು ಕೇಳಲಾಗದೇ ಜಯಚಾಮರಾಜ ಒಡೆಯರ್‌ರವರು ಸಭೆಯನ್ನು ತ್ಯಜಿಸಲು ಸುಬ್ಬರಾಯರನ್ನು ಕೇಳಿದರು. ಸುಬ್ಬರಾಯರು ಇದರಿಂದ ಮುಂದೆ ಆಗುವ ದುಷ್ಪರಿಣಾಮವನ್ನು

ಅರಿತು ತಾವೇ ಎದ್ದು ಹೋಗಿ ನೇಪಥ್ಯದ ಹಿಂದೆ ಇದ್ದ ಸಂಗೀತ ನಿರ್ದೇಶಕನಿಗೆ ವಿಷಯ ತಿಳಿಸಿದಾಗ ಆತನು ಮಹದಾಶ್ಚರ್ಯ ವ್ಯಕ್ತಪಡಿಸಿ, ರಾಜಕುಮಾರರ ಶ್ರೋತೃಜ್ಞಾನವನ್ನು ಅಭಿನಂದಿಸಿ ತಾನೇ ಅದನ್ನು ಗಮನಿಸಿರುವುದಾಯೂ, ಕೃತಿ ಮುಗಿದನಂತರ ಸರಿಪಡಿಸುವುದಾಗಿಯೂ ಹೇಳಿದನು. ರಾಜಕುಮಾರರು ಒಪ್ಪಿ ಕುಳಿತರು. ಹೀಗೆ ನಿರ್ದೇಶಕನಿಗೆ ಆಗಬಹುದಾಗಿದ್ದ ಭಾರಿ ಅವಮಾನ ತಪ್ಪಿತು.

ಇವರು ಅಧಿಕಾರದಲ್ಲಿದ್ದಾಗ ಸರ್ಕಾರದ ಅಂಗವಾಗಿ ಸರಕಾರೀ ಕೈಗಾರಿಕಾ ಮತ್ತು ಪರೀಕ್ಷಾ ಪ್ರಯೋಗಶಾಲೆ (Govt. Industrial and Testing Lab) ಅನ್ನು ಸ್ಥಾಪಿಸಿದರು. ಇದಕ್ಕೆ ಎಸ್. ಜಿ. ಶಾಸ್ತ್ರಿಗಳು ಸಹಕಾರ ಕೊಟ್ಟರು. ಇದಕ್ಕೆ ಪೂರಕವಾಗಿ ದೇಶದ ನಾನಾ ಸ್ಥಳದಲ್ಲಿ ಇದ್ದ ಔಷಧ ಮತ್ತು ರಾಸಾಯನಿಕ ಘಟಕಗಳಿಗೆ ಭೇಟಿ ನೀಡಿದ್ದರು.

ಈ ಸಂಸ್ಥೆಯನ್ನು ಸ್ಥಾಪಿಸಲು ಸುಬ್ಬರಾಯರೂ ಹಾಗೂ ಎಸ್.ಜಿ.ಶಾಸ್ತ್ರಿಗಳು ಬಹಳವಾಗಿ ಶ್ರಮಿಸಿದರು. ಮುಂದೆ ಈ ಸಂಸ್ಥೆ ಸಂಯುಕ್ತ ಬಂಡವಾಳ ಸಂಸ್ಥೆ (Joint Stock Company)ಯಾಗಿ ಪರಿವರ್ತನೆಯಾಯಿತು. ಅದಕ್ಕೆ ಇವರನ್ನು ಮೊಟ್ಟಮೊದಲ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರು (CMD) ಆಗಿ ಸರ್ಕಾರ ನೇಮಿಸಿತು. ಬಹಳ ಕಾಲ ಈ ಹುದ್ದೆಯನ್ನು ನಿರ್ವಹಿಸಿ ಸಂಸ್ಥೆಯನ್ನು ಬೆಳೆಸಿದರು. ಅಂದಿನ ಐಟಿಯಾಲ್, ಆಸ್ತಮಾ ಸಿರಪ್, ಗ್ರೈಪ್ ವಾಟರ್‌ಗಳು ಮನೆಮಾತಾಗಿದ್ದವು. ಮುಂದೆ ಈ ಸಂಸ್ಥೆ ಆಸ್ಟ್ರಾ ಐಡಿಯಲ್ ಜೊತೆ ವಿಲೀನಗೊಂಡು ಇಂದು ವಹಿವಾಟು ನಡೆಸುತ್ತಿರುವುದು.

1937ರಲ್ಲಿ ಇವರ ಬಹು ಮುಖಪ್ರತಿಭೆಯನ್ನು, ಶಸ್ತ್ರವೈದ್ಯ ನಿಪುಣತೆಯನ್ನು ಗುರುತಿಸಿ ಆಗಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಸುಬ್ಬರಾಯರಿಗೆ "ಶಸ್ತ್ರ ವೈದ್ಯ ಪ್ರವೀಣ" ಎಂಬ ಬಿರುದನ್ನು ದಯಪಾಲಿಸಿದರು. ಸುಬ್ಬರಾಯರಿಗೆ ತಮ್ಮ ಮೈಸೂರು ಸರ್ಕಾರದ ಸೇವಾ ಅವಧಿಯಲ್ಲಿ ದಿವಾನರುಗಳಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ, ಮಿರ್ಜಾಇಸ್ಮಾಯಿಲ್

ಸಾಹೇಬರ, ಮಹಾರಾಜರ ಖಾಸಗೀ ಕಾರ್ಯದರ್ಶಿಯಾಗಿದ್ದ ತಂಬೂಚೆಟ್ಟಿಯವರ, ಹಾಗೂ ದಿವಾನ್ ಎಸ್.ಮಾಧವರಾಯರ, ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿದ್ದ ಎನ್. ಎಸ್. ಸುಬ್ಬರಾವ್‌ರವರ ನಿಕಟಪರಿಚಯವಿತ್ತು. ಅವರುಗಳು ಸುಬ್ಬರಾಯರ ಅನೇಕ ಸುಧಾರಣೆಗಳಿಗೆ ಪ್ರೋತ್ಸಾಹವನ್ನಿತ್ತು ಅವುಗಳನ್ನು ಕಾರ್ಯರೂಪಕ್ಕೆ ತರಲು ಸಹಕರಿಸಿದರು. ಧರ್ಮಕಾರ್ಯ ಪ್ರವೀಣ ಶ್ರೀ ಎಸ್. ಸಜ್ಜನರಾಯರು ಇವರ ಆಪ್ತವರ್ಗಕ್ಕೆ ಸೇರಿದವರು.

ಮಹಾತ್ಮಗಾಂಧಿಯವರು 1936ರಲ್ಲಿ ನಂದಿಬೆಟ್ಟದಲ್ಲಿ ವಿಶ್ರಾಂತಿಗಾಗಿ ಬಂದಿದ್ದಾಗ ಅವರ ಆರೋಗ್ಯದ ಮೇಲ್ವಿಚಾರಕರಾಗಿದ್ದವರು ಶ್ರೀ ಸುಬ್ಬರಾಯರು. ಮಹಾತ್ಮಗಾಂಧಿಯವರು ಪೂರ್ಣ ಗುಣಮುಖರಾಗಿದ ಮೇಲೆ ಒಂದು ಪತ್ರವನ್ನು ಶ್ರೀ ಸುಬ್ಬರಾಯರಿಗೆ ಬರೆದರು. ಅದರ ನಕಲನ್ನು ಇದರ ಜೊತೆಗೆ ಇಟ್ಟಿದೆ. ಅದನ್ನು ಓದುಗರು ತಾವೇ ಪರಾಂಬರಿಸಬಹುದು. ಅದರ ಸಾರಾಂಶ ಇಷ್ಟೇ. ಮಹಾತ್ಮ ಗಾಂಧಿಯವರು ತಮ್ಮ ಆಪ್ತರ ಅನಾರೋಗ್ಯದ ಬಗ್ಗೆ ಬರೆದು ಸುಬ್ಬರಾಯರು ಅದನ್ನು ಪರಿಶೀಲಿಸುವಂತೆ ಕೇಳಿಕೊಂಡಿದ್ದರು.

ಇನ್ನೊಂದು ಪತ್ರ : ಶ್ರೀ ಚಂದ್ರಶೇಖರ್ ಶುಕ್ಲ, ಗಾಂಧಿಯವರ ಆಪ್ತರು. ಸೀತಾರಾಮ ವಾಡೆ, ರಾಯಪುರ, ಬರೋಡ, ಇವರು ಸುಬ್ಬರಾಯರಿಗೆ ಬರೆದದ್ದು. ತಾರೀಖು 19.07.1948. ಅದನ್ನು ಇದರ ಜೊತೆ ಲಗತ್ತಿಸಿದೆ. ಅದರ ಸಾರಾಂಶವೇನೆಂದರೆ ಗಾಂಧೀಜಿಯವರನ್ನು ಕುರಿತು ತರಲಾಗುತ್ತಿರುವ ಪುಸ್ತಕಕ್ಕೆ ಸುಬ್ಬರಾಯರು ಕೆಲ ಕಾಲ ಗಾಂಧೀಜಿಯವರ ಜೊತೆಗಿದ್ದುದರ ಅನುಭವ, ಅವರ ಬಗ್ಗೆ ತಮ್ಮ ಅನಿಸಿಕೆಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿಸಿ, ಗಾಂಧೀಜಿಯವರು ಔಷಧಗಳ ಬಗ್ಗೆ ಹೊಂದಿದ್ದ ಅಭಿಪ್ರಾಯ, ಅದರ ಚತುರೋಕ್ತಿಗಳು ಇತ್ಯಾದಿಯ ಕುರಿತು ವಿವರಣೆ ಕೇಳಿದ್ದು.

ಶ್ರೀ ಸುಬ್ಬರಾಯರು ಶಿಸ್ತಿಗೆ ಹೆಸರಾದವರು ಹಾಗೂ ಒಳ್ಳೆಯ ಮಾತುಗಾರರು ಯಾವಾಗಲೂ ಶುಭ್ರ ಉಡುಗೆ, ಸದಾ ಹಸನ್ಮುಖಿಯಾಗಿದ್ದವರು. ಇವರು ಶಿಸ್ತನ್ನು

ತಮ್ಮ ಕುಟುಂಬದ ಸದಸ್ಯರಿಂದ ಹಿಡಿದು ಕಛೇರಿಯಲ್ಲಿನ ಸಿಬ್ಬಂದಿಯವರೆಗೂ ಪರಿಪಾಲಿಸುವಂತೆ ನೋಡಿಕೊಂಡರು. ಅದರಿಂದ ಅವರೆಲ್ಲರ ಸರ್ವತೋಮುಖ ಅಭಿವೃದ್ಧಿಯಾದದ್ದರಲ್ಲಿ ಆಶ್ಚರ್ಯವೇನಿದೆ? ಸುಬ್ಬರಾಯರ ವೈದ್ಯಕೀಯ ಗ್ರಹಿಕೆ ಅಸಾಧಾರಣವಾದದ್ದು. ರೋಗಿಯನ್ನು ಸಂಪೂರ್ಣ ಪರೀಕ್ಷಿಸಿ ರೋಗ ಇಂತಹುದೇ ಎಂದು ಪತ್ತೆ ಹಚ್ಚುವುದರಲ್ಲಿ ನಿಷ್ಣಾತರು. ರೋಗಿಗಳಿಗೆ ಅನಾವಶ್ಯಕವಾಗಿ ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆಗಳನ್ನು ವಿಧಿಸುತ್ತಿರಲಿಲ್ಲ. ರೋಗಿಗಳ ಹಿತವೇ ಮುಖ್ಯವಾಗಿದ್ದ ಅವರಿಗೆ ಎಷ್ಟು ಬೇಕೋ ಅಷ್ಟೇ ಪ್ರಯೋಗಶಾಲೆಯ ಪರೀಕ್ಷೆಗಳನ್ನು ಹೇಳುತ್ತಿದ್ದರು. ಅವರ ಶಸ್ತ್ರಚಿಕಿತ್ಸೆಯು ಎಷ್ಟು ಕೌಶಲ್ಯ ಪೂರಿತವಾಗಿ ನಿಪುಣತೆಯಿಂದ ಕೂಡಿತ್ತೆಂದರೆ ಶಸ್ತ್ರಚಿಕಿತ್ಸೆ ವಿಫಲತೆಯೇ ಬಹಳ ಅಪರೂಪ ವಾಗಿತ್ತು. ಕಲಿತವಿದ್ಯೆಯ ಮತ್ತು ಅನುಭವದ ಹಿನ್ನೆಲೆಯಲ್ಲಿ ಶಸ್ತ್ರಚಿಕಿತ್ಸೆಯಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತಂದವರು ಶ್ರೀ ಸುಬ್ಬರಾಯರು.

ಸಾಧನೆಗಳು:

(1) ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದಾಗ ಅನೇಕ ಹೊಸ ವಿಭಾಗಗಳನ್ನು ತೆರೆದಿದ್ದು.

(2) ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಯಲ್ಲಿ ಆಡಳಿತ ಸುಧಾರಣೆ ಹೊಸ ವಿಭಾಗಗಳ ರಚನೆ.

(3) ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಯ ಸುಧಾರಣೆ.

(4) ಅಕ್ಕಿ ಹೆಬ್ಬಾಳಿನಲ್ಲಿ ತಂದೆಯ ಹೆಸರಿನಲ್ಲಿ ಸಾರ್ವಜನಿಕ ಆಸ್ಪತ್ರೆಯ ಸ್ಥಾಪನೆ.

(5) ಹೊಂಬೇಗೌಡ ನಗರದಲ್ಲಿರುವ ಹೊಯ್ಸಳ ಕರ್ನಾಟಕ ಸಂಘದ ಸ್ಥಾಪನೆಗೆ ಮುಖ್ಯಕಾರಣರು, ಹೆಚ್ಚಿನ ಧನಸಹಾಯ ನೀಡಿಕೆ.

(6) ಸರ್ಕಾರಿ ಆಸ್ಪತ್ರೆಗಳಲ್ಲಿ "ಕುಟುಂಬ ಯೋಜನೆ" ಯನ್ನು ಜಾರಿಗೊಳಿಸಿದ್ದು.

(7) MITL ಸರ್ಕಾರ ಸಂಸ್ಥೆಯನ್ನು ಎಸ್.ಜಿ. ಶಾಸ್ತ್ರಿಗಳ ಸಹಕಾರದಿಂದ ಸ್ಥಾಪನೆ. ಅದೆ ಮೊದಲ ಸರ್ಕಾರದ ವಿಭಾಗವಾಗಿ MITL ಆದಮೇಲೆ ಅಧ್ಯಕ್ಷರು.

(8) ಬಡ ವಿದ್ಯಾರ್ಥಿಗಳಿಗೆ ಧನಸಹಾಯ, ಮನೆಯಲ್ಲಿ ವಾರಾನ್ನದ ಏರ್ಪಾಡು.

(9) ಶಸ್ತ್ರಚಿಕಿತ್ಸೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಚಿನ್ನದ ಪದಕ ನೀಡಲು ಏರ್ಪಾಡು.

(10) ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದ್ದ ಕಾಲದಲ್ಲಿ ಎಲ್ಲಾ ರಂಗದಲ್ಲಿಯೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಲು ಹೋರಾಟ.

(11) ನೊಬೆಲ್ ಲಾರೆಟ್ ಸರ್.ಸಿ.ವಿ.ರಾಮನ್‌ರವರ INDIAN ACADEMY OF SCIENCE ಸಂಸ್ಥೆಗೆ ನೆರವಾದದ್ದು. ಈ ಸಂಸ್ಥೆ ಈಗ ಸರ್ವತೋಮುಖವಾಗಿ, ವಿಶ್ವವಿಖ್ಯಾತವಾಗಿ, ಬೃಹದಾಕಾರವಾಗಿ ಬೆಳೆದಿದೆ. ಆ ಸಂಸ್ಥೆಗೆ ಒಂದು ವರುಷ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

(12) ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮ್ಮತ್ತು ಕೌನ್ಸಿಲ್ ಮೆಂಬರಾಗಿ ಸರ್ಕಾರದ ಆಯ್ಕೆ ಮೇರೆಗೆ ಸೇವೆಸಲ್ಲಿಸಿದ್ದರು.

ಶ್ರೀ ಸುಬ್ಬರಾಯರು ಪ್ರಚುರ ಪಡಿಸಿದ ಅನೇಕ ವಿದ್ವತ್‌ಪೂರ್ಣ ಲೇಖನಗಳಲ್ಲಿ ಕೆಲವು ಈ ರೀತಿ ಇವೆ.

(1) ಶಸ್ತ್ರಚಿಕಿತ್ಸೆ ಬಗ್ಗೆ ಒಂದು ಪುಸ್ತಕ.

(2) ಹೊಟ್ಟೆಯಲ್ಲಿನ ಶಸ್ತ್ರ ಚಿಕಿತ್ಸೆಯ ಬಗ್ಗೆ ಕೆಲವು ಅಂಶಗಳು.

(3) "ಓವೇರಿಯನ್ ಸಿಸ್ಟ್"

(4) ಮೈಸೂರು ಮೆಡಿಕಲ್ ಅಸೋಸಿಯೇಷನ್ ಜರ್ನಲ್‌ನಲ್ಲಿ ಅನೇಕಾನೇಕ ಲೇಖನಗಳು.

ಸಮಾಜದ ಪ್ರತಿಭಾಸ್ವಿತರು ಮತ್ತು ಖ್ಯಾತಿ ಹೊಂದಿದ ಮಹನೀಯರ ಮನಒಲಿಸಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗಳನ್ನು ತೆರೆಯಲು ಶ್ರಮಿಸುತ್ತಿದ್ದರು. ಇವರಲ್ಲಿ ಬಿ. ಎಂ. ಶ್ರೀನಿವಾಸಯ್ಯನವರು, ಎಸ್. ಪಿ. ಶ್ರೀನಿವಾಸ ಶೆಟ್ಟರೂ, ಚಿಕ್ಕಮಗಳೂರಿನ ನಾಗಪ್ಪ ಶೆಟ್ಟರು ಸೇರಿರುವರು.

ಸುಬ್ಬರಾಯರದು ಬಹು ಮುಖ ಪ್ರತಿಭೆ. ವೈದ್ಯಕೀಯ ವಿಭಾಗದಲ್ಲೇ ಅಲ್ಲದೆ ಜೀವನದ ಇತರ ರಂಗಗಳಲ್ಲಿ ಅವರು ಸದಭಿರುಚಿಯನ್ನು ಹೊಂದಿದ್ದರು. ಬ್ರಿಟಿಷ್ ಮೆಡಿಕಲ್ ಅಸೋಸಿಯೇಷನ್ (BMA), ಇಂಡಿಯನ್ ಅಕಾಡಮಿ ಆಫ್ ಸೈನ್ಸ್ (IASc), ಮೈಸೂರು ಮೆಡಿಕಲ್ ಅಸೋಸಿಯೇಷ್‌ನ್, ದಕ್ಷಿಣ ಭಾರತ ವೈದ್ಯಕೀಯ ಸಂಸ್ಥೆ (SIMA) ಇವುಗಳ ಸದಸ್ಯತ್ವವು ಮುಖ್ಯವಾದವುಗಳು. ಅಲ್ಲದೇ ರೋಟರಿ ಕ್ಲಬ್, ಬೆಂಗಳೂರ ಶಾಖೆಯ ಸ್ಥಾಪಕರಲ್ಲಿ ಮುಖ್ಯರಾದವರೊಬ್ಬರು ಮತ್ತುಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದರು. ಅಲ್ಲದೇ ಸೆಂಚುರಿ ಕ್ಲಬ್ ಅಧ್ಯಕ್ಷರಾಗಿ 2 ವರುಷ (1949–51) ಸೇವೆ ಸಲ್ಲಿಸಿದರು. ಇವರ ಕೊನೆಗಾಲದಲ್ಲಿ ಇವರ ಸೇವೆಯನ್ನು ಪರಿಗಣಿಸಿ ರೋಟರಿ ಕ್ಲಬ್‌ನ ಲೈಫ್ ಮೆಂಬರ್ ! ಮಾಡಿದರು. (ಅಜೀವ ಸದಸ್ಯತ್ವವನ್ನು ಕೊಟ್ಟರು). ಈ ಎಲ್ಲ ಸಂಸ್ಥೆಗಳಲ್ಲಿ ಗಣ್ಯರ ಪರಿಚಯವಾಗಿ ಅವರವರ ಕ್ಷೇತ್ರಗಳಲ್ಲಿ ಪರಿಣತಿಯನ್ನು ಹೊಂದಿದ್ದವರ ಜೊತೆ ಸಕ್ರಿಯ ಚರ್ಚೆ, ವಿಚಾರ ವಿನಿಮಯಗಳೂ ನಡೆದು ಜ್ಞಾನಾರ್ಜನೆಗೆ ಪೂರಕವಾಗುತ್ತಿತ್ತು. ಇವುಗಳಲ್ಲದೇ ಸುಬ್ಬರಾಯರು ಬೆಂಗಳೂರಿನ ಶಾಖೆಯಾದ ಬೆಂಗಳೂರು ಚಾಪ್ಟರ್ ಆಫ್ ಮಸಾನಿಕ್ ಲಾಡ್ಜ್ ನಲ್ಲಿ "ಫ್ರೀ ಮಾಸನ್" ಆಗಿಯೂ ಸೇವೆ ಸಲ್ಲಿಸಿದರು.

ಫ್ರಿ ಮೆಸನ್ ಲಾಡ್ಜ್ ಸಂಸ್ಥೆಯ ಧನಸಹಾಯದಿಂದ ವಿಕ್ಟೋರಿಯ ಆಸ್ಪತ್ರೆಯಲ್ಲಿ ಒಂದು ಕಟ್ಟಡವನ್ನು ನಿಯೋಜಿಸಿದರು.

1928–29 ರಲ್ಲಿ ಅವರು ವಿಶ್ವೇಶ್ವರಪುರಂನಲ್ಲಿ ಕಟ್ಟಿಸಿದ ಮನೆ ವಾಸ್ತು, ವಿನ್ಯಾಸ, ಶೈಲಿ, ತಾಂತ್ರಿಕತೆ ಅಭಿರುಚಿಗಳಿಗೆ ಹೆಸರಾಗಿ MANSION OF BANGALORE ಎಂದು ಪ್ರಸಿದ್ಧಿ ಪಡೆದಿತ್ತು.

ಹೀಗೆ ಜೀವನದ ವಿವಿಧ ರಂಗಗಳಲ್ಲಿ ಶ್ರದ್ಧೆ, ಆಸಕ್ತಿ ಮುಂದಾಳುತನವಹಿಸಿ ಸಮಾಜದ ಆದರಣೆಗೆ, ಗೌರವಕ್ಕೆ ಪಾತ್ರರಾಗಿದ್ದ ಧೀಮಂತ ವ್ಯಕ್ತಿ ಸುಬ್ಬರಾಯರು. ಅವರ ಜೀವನ ಕುಸುಮ 20ನೇ ಶತಮಾನದ ಆದಿಯಲ್ಲಿ ಅರಳಿ ಸುಗಂಧಬೀರಿ ಎಲ್ಲರಿಗೂ ತೃಪ್ತಿ ಸಮಾಧಾನ ಕೊಟ್ಟು ದಿನಾಂಕ: 02-01-1955ರಲ್ಲಿ ಬಾಡಿಹೋಯಿತು.

ಸುಬ್ಬರಾಯರ ಮಕ್ಕಳು:

ಸುಬ್ಬರಾಯರಿಗೆ ಮೊದಲ ಧರ್ಮಪತ್ನಿ ಶ್ರೀಮತಿ ವೆಂಕಟಲಕ್ಷಮ್ಮನವರಿಂದ 5 ಜನ ಗಂಡು ಮಕ್ಕಳು ಒಬ್ಬ ಮಗಳು ಜನಿಸಿದರು. ಮೊದಲನೇ ಮಗ ನರಸಿಂಹಸ್ವಾಮಿ ಅಲ್ಪಾಯು, ಟೈಫಾಯಿಡ್‌ಜ್ವರದಿಂದ ತೀರಿಕೊಂಡ. ಸುಬ್ಬರಾಯರ ದ್ವಿತೀಯ ಪತ್ನಿಯಿಂದ ಒಬ್ಬ ಮಗ, ಒಬ್ಬ ಮಗಳು ಜನಿಸಿದರು. ಕಾಲಾನುಕ್ರಮವಾಗಿ ಜನಿಸಿದ ಅವರ ಹೆಸರುಗಳು ಹೀಗಿವೆ: ನರಸಿಂಹಸ್ವಾಮಿ (ಏಳನೇವಯಸ್ಸಿನಲ್ಲಿ ತೀರಿಕೊಂಡ) ರಾಮಸ್ವಾಮಿ, ಅನಂತಸ್ವಾಮಿ, ನಾರಾ೦ಯಣಸ್ವಾಮಿ, ಕೃಷ್ಣಸ್ವಾಮಿ, ವಿಶಾಲಾಕ್ಷಿ, ಗೋಪಾಲಸ್ವಾಮಿ, ರಂಗಸ್ವಾಮಿ ಮತ್ತು ವೆಂಕಟಲಕ್ಷ್ಮಿ

ರಾಮಸ್ವಾಮಿ:

ರಾಮಸ್ವಾಮಿಯವರು ಪ್ರತಿಭಾನ್ವಿತರು, ಸೆಂಟ್ರಲ್ ಕಾಲೇಜಿನಲ್ಲಿ B.Sc., ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ 1928ರಲ್ಲಿ ತಂದೆಯವರ ಪ್ರೋತ್ಸಾಹದಿಂದ ಇಂಗ್ಲೆಂಡಿಗೆ ಹೋಗಿ ಭೌತಶಾಸ್ತ್ರದಲ್ಲಿ ಬಹಳ ಕಡಿಮೆ ಅವಧಿ೦ಯಲ್ಲಿ Ph.D., ಪದವಿ ಪಡೆದರು, ಎಕ್ಸರೇ, ಕ್ರಿಸ್ಟಲೋಗ್ರಫಿ ವಿಚಾರಗಳ್‌ಲ್ಲಿ ಸಂಶೋಧನೆ ನಡೆಸಿ ಅನೇಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದರು. ನಂತರ ಸ್ವದೇಶಕ್ಕೆ ವಾಪಸ್ಸಾಗಿ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕೆಲಕಾಲ ಸಿ.ವಿ.ರಾಮನ್‌ರವರ ಶಿಷ್ಯರಾಗಿ ಕೆಲಕಾಲ ಸಂಶೋಧ‌ಕರಾಗಿ ಕಾರ್ಯನಿರ್ವಹಿಸಿದರು. ನಂತರ ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿ, ಉಪಪ್ರಾಧ್ಯಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ 1963ರಲ್ಲಿ ನಿವೃತ್ತಿ ಪಡೆದರು.

ಅನಂತಸ್ವಾಮಿ:

ಅನಂತಸ್ವಾಮಿ, ಬಿ.ಎಸ್ಸಿ ಪದವೀಧರರಾದ ಮೇಲೆ, ಬೊಂಬಾಯಿಗೆ ಹೋಗಿ ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು. ಸ್ವಲ್ಪದಿನ ಅದೇ ಕಾಲೇಜಿನಲ್ಲಿ ಫಿಸಿಯಾಲಜಿ ವಿಭಾಗದಲ್ಲಿ ಕೆಲಸ ಮಾಡಿ ಬೆಂಗಳೂರಿಗೆ ಹಿಂತಿರುಗಿದರು. 1938–39 ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇವೆ. ನಂತರ ಮೈಸೂರು ಸರ್ಕಾರದ ಆರೋಗ್ಯ ಇಲಾಖೆಗೆ ಸೇರ್ಪಡೆ. 1940–41 ರಲ್ಲಿ ಸರ್ಕಾರದಿಂದ ಅನುಜ್ಞೆ ಪಡೆದು ಕಲ್ಕತ್ತದಲ್ಲಿ ಅಖಿಲ ಭಾರತ ಸಾರ್ವಜನಿಕ ಆರೋಗ್ಯ ಸಂಸ್ಥೆ (ALL INDIA INSTITUTE OF PUBLIC HEALTH) ನಲ್ಲಿ ಓದಿ D.P.H ಪದವಿ ಪಡೆದರು. ನಂತರ ಬೆಂಗಳೂರಿಗೆ ವಾಪಸ್ಸಾಗಿ ಪಬ್ಲಿಕ್ ಹೆಲ್ತ್ ಇನ್ಸ್ಟಿಟೂಟ್‌ನಲ್ಲಿ ಬ್ಯಾಕ್ಟೀರಿಯಾಲಜಿಸ್ಟ್ ಆಗಿ ಸೇವೆ. 1948ರಲ್ಲಿ ಸರ್ಕಾರದಿಂದ ಸ್ಕಾಲರ್‌ಷಿಪ್ ಪಡೆದು ಅಮೇರಿಕಾಕ್ಕೆ ಹೋಗಿ ಅಲ್ಲಿ ಜಾನ್ ಹಾಪ್‌ಕಿನ್ಸ್ ಸಂಸ್ಥೆಯಲ್ಲಿ ಓದಿ MPH ಪದವಿ ಪಡೆದರು. ಅಲ್ಲಿಂಯೇ ಬಾಲ್ಟಿಮೋರ್‌ನಲ್ಲಿ ಕೆಮಿಕಲ್ ಎಕ್ಸಾಮಿನರ್ ವಿಭಾಗದಲ್ಲಿ ತರಬೇತಿ ಪಡೆದರು. ನಂತರ ಇಂಗ್ಲೇಂಡಿಗೆ ಹೋಗಿ ಕೆಲವು ಆರೋಗ್ಯ ಸಂಶೋಧನ ಕೇಂದ್ರಗಳಲ್ಲಿ ಅಧ್ಯಯನ ನಡೆಸಿದರು. ಸ್ವದೇಶಕ್ಕೆ ಆಗಿಮಿಸಿದ ನಂತರ ಪುನಃ ಪಬ್ಲಿಕ್ ಹೆಲ್ತ್ ಇನ್ಸ್ಟಿಟ್ಯೂಟ್‌ನಲ್ಲಿ ಕೆಮಿಕಲ್ ಎಕ್ಸಾಮಿನರಾಗಿ ಸೇವೆ. ದೇಶದ ಅನೇಕ ಪಬ್ಲಿಕ್ ಹೆಲ್ತ್ ಸಂಸ್ಥೆಗಳಿಗೆ ಭೇಟಿ ನಂತರ ಜಾಯಿಂಟ್ ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಆಗಿ ಬಡ್ತಿ, ನಿವೃತ್ತಿ 1968ರಲ್ಲಿ.

ನಾರಾಯಣಸ್ವಾಮಿ:

ಓದು ಮುಗಿದ ನಂತರ ಭದ್ರಾವತಿಯ ಕಬ್ಬಿಣ ಕಾರ್ಖಾನೆಯಲ್ಲಿ ವೃತ್ತಿ ಜೀವನ, ಅಲ್ಲಿಯೇ ಅನೇಕ ಬಡ್ತಿಗಳನ್ನು ಪಡೆದು ಆ ಸಂಸ್ಥೆಯಿಂದಲೇ Superintendent ಆಗಿ ನಿವೃತ್ತಿ.

ಕೃಷ್ಣಸ್ವಾಮಿ :

ಸೆಂಟ್ರಲ್‌ಕಾಲೇಜಿನಲ್ಲಿ CBZ ನಲ್ಲಿ B.Sc., ಪಡೆದು ಮತ್ತೆ ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ M.Sc., (Botany) ಪಧವಿ ಪಡೆದರು ನಂತರ ಅರಣ್ಯ ಇಲಾಖೆಯ ಸೇವೆ ಪ್ರಾರಂಭಿಸಿದರು. ನಂತರ ಇವರು ಡೆಹರಾಡೂನಿನ Indian Forest College ನಲ್ಲಿ ತರಬೇತಿಗೆ ತೆರಳಿದರು. ಬಂದ ಮೇಲೆ ಸಂಸ್ಥಾನದ ಅರಣ್ಯ ಇಲಾಖೆಯಲ್ಲಿ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಿದರು. 1947ನೇ ಇಸವಿಯಲ್ಲಿ ಇವರ ತಂದೆ ಅಮೇರಿಕಾಕ್ಕೆ Yale University ಗೆ ಕಳುಹಿಸಿಕೊಟ್ಟರು. ಅಲ್ಲಿ Doctorate in Forestry ಬಹಳ ಕಡಿಮೆ ಅವಧಿಯಲ್ಲಿ ಪಡೆದರು ಮತ್ತೆ Washington University ಇಂದ ಇವರ ಶ್ರೇಷ್ಠ ಪ್ರಬಂಧಕ್ಕೆ Wood Award ಪ್ರಶಸ್ತಿ ಪಡೆದರು. ಅಮೆರಿಕಾದಿಂದ ಹಿಂತಿರುಗಿದ ಮೇಲೆ DFO ಆಗಿ ಸೇವೆ, ಇದಾದ ಮೇಲೆ Deheradun ನ Forest College ನಲ್ಲಿ ಅಧ್ಯಾಪಕರಾಗಿದ್ದರು, ನಂತರ Railway Board ನಲ್ಲಿ Joint Director (Timber) ಆಗಿ ನಂತರ ಕಾಲವಾಗುವುದಕ್ಕೆ ಮುಂಚೆ Director ಆಗಿದ್ದರು. Japan & Australian ದೇಶಗಳಿಗೆ ಪ್ರವಾಸ. ನಿವೃತ್ತಿಯಾಗುವ ಮುಂಚೆಯೇ ಅಕಾಲ ಮರಣ ಹೊಂದಿದರು. ಅವರಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇರುವರು.

ಗೋಪಾಲ ಸ್ವಾಮಿ :

ಓದು ಮುಗಿದ ಮೇಲೆ ಮೈಸೂರು ಬ್ಯಾಂಕ್‌ನಲ್ಲಿ ವೃತ್ತಿ. ಬಹಳ ವರ್ಷ ಅಲ್ಲಿಯೇ ಸೇವೆ ಸಲ್ಲಿಸಿ ನಿವೃತ್ತಿಯಾದರು. ಅವರಿಗೆ ಒಬ್ಬಳೇ ಮಗಳು. ಮೈಸೂರ್ ಬ್ಯಾಂಕ್‌ನಲ್ಲಿ ಸೇವೆ ಸಲ್ಲಿಸುತ್ತಿರುವರು.

ವಿಶಾಲಾಕ್ಷಮ್ಮ :

ಶ್ರೀ ಎಂ.ಎನ್.ರಾಮಸ್ವಾಮಿಯವರ ಪತ್ನಿ, ರಾಮಸ್ವಾಮಿಯವರು ಅರಣ್ಯ ಇಲಾಖೆಯಲ್ಲಿ Chief Scientific Officer ನಂತರ ಸೇವೆ ಸಲ್ಲಿಸಿದ್ದರು. ಭಾರತ ಸರ್ಕಾರದ CSIR ನ CIMPO ದಕ್ಷಿಣ ಶಾಖೆ ವಿಭಾಗಕ್ಕೆ ಮುಖ್ಯಸ್ಥರಾಗಿದ್ದರು.

ಸೇವಾವಧಿಯಲ್ಲಿ ಐರೋಪ್ಯ ಪ್ರದೇಶ, ರಷ್ಯಾ, ಆಸ್ಟ್ರೇಲಿಯಾ ಪ್ರವಾಸ ಕೈಗೊಂಡಿದ್ದರು. 1968ರಲ್ಲಿ ಮೃತರಾದರು.

ರಂಗಸ್ವಾಮಿ :

ಬಿ.ಇ. ಪದವೀಧರರು ಕರ್ನಾಟಕ ಇಂಜಿನಿಯರ್ ಇಲಾಖೆಯಲ್ಲಿ ವೃತ್ತಿ, ನಂತರ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ನಿವೃತ್ತಿ.

ವೆಂಕಟಲಕ್ಷ್ಮಿ :

ಪದವೀಧರೆ, ಅಜ್ಜಂಪುರದ ನಾಗಭೂಷಣರಾವ್‌ರೊಂದಿಗೆ ವಿವಾಹ, ನಾಗಭೂಷಣರಾವ್ ಅವರು ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪೆನಿಯ ಮುಖ್ಯಸ್ಥರು. ದೇಶದ ಅನೇಕ ಪ್ರದೇಶಗಳಲ್ಲಿ ಕಾರ್ಯವ್ಯಾಪ್ತಿ, ನಂತರ ನಿವೃತ್ತಿ.

ಡಾ॥ ಸುಬ್ಬರಾಯರು ಬಲು ಹಾಸ್ಯಪ್ರಿಯರು. ಹಾಸ್ಯಪ್ರವೃತ್ತಿಯೇ ಅವರ ಜೀವನದ ಹಾಸುಹೊಕ್ಕಾಗಿದ್ದಿತು. ಅವರ ಈ ಪ್ರವೃತ್ತಿಗೆ ಅಸಂಖ್ಯಾತ ಘಟನೆಗಳನ್ನು ಉದಾಹರಿಸಬಹುದು. ಆದರೆ ಮಾಸ್ತಿ ವೆಂಕಟೇಶ ಅಯ್ಯಂಗಾರರು, "ಶ್ರೀನಿವಾಸ" ರಾಗಿ ತಮ್ಮ ಜೀವನ ಪತ್ರಿಕೆಯಲ್ಲಿ (ಪುಟ-290-291) "ನವರಾತ್ರಿ" ಎಂಬ ತಮ್ಮ ಪದ್ಯಗದ್ಯ ಸಮ್ಮಿಶ್ರ ರೂಪವಾದ ಕವನದಲ್ಲಿ ಬರೆದಿರುವುದನ್ನು ಗಮನಿಸೋಣ. ಅದನ್ನು ಓದಿ ನಾವೂ ನಕ್ಕು ನಲಿಯೋಣ.

ಇಂಥ ಸಾಹಿತ್ಯದ ಪುರೋಹಿತರ ಹೆಸರಿಸಿ
ನೆರೆದ ಕಳೆಯಲಿ ಎರಡನೆಯ ಹೆಸರು ಯಾರದೆನೆ
"ನನಗೆ ಸಾಹಿತ್ಯಗೀಹಿತ್ಯಗಳ ಗಂಧವೂ
ಇಲ್ಲಪ್ಪ, ಬೇಕೆನೆ ಅಯೋಡೊಫಾರಂ ಕೊಳ್ಳಿ"
ಎಂಬ ಡಾಕ್ಟರದು. ಸಾಹಿತ್ಯ ಗೀಹಿತ್ಯಗಳ
ಗಂಧವಿಲ್ಲದ ಈ ಮಹಾತ್ಮ ಆಡುವ ಮಾತು
ಸತತವೂ ಸಾಹಿತ್ಯ, ಹಾಸ್ಯ. ಹಾಸ್ಯದ ವಿಷಯ

ವೈದ್ಯಕೀಯಮಾತಿಂದ ಮೊದಲಾಗಿ ಲೋಕದಲಿ
ಯಾವ ಸಂಗತಿಯನೂ ಸ್ಪರ್ಶಿಸದೆ ಬಿಟ್ಟಿಲ್ಲ.
ಜೊತೆಗೆ ಈ ಹಾಸ್ಯವೋ ಆ ಕ್ಷಣದ ಹೊಳಹಿನದು
ಒಮ್ಮೆ ಮಿತ್ರರು ಒಂದು ಆಂಗ್ಲಕತೆಯನ್ನು ಹಿಡಿದು
ಇವರೆದುರು ಬಂದರು. ಅದು The Ex-wife ಎಂಬ
ಕತೆ. ಡಾಕ್ಟರವ ನೋಡಿ, "ಸರಿಯೇ" "Why Husband"
ಎಂದು ಹೇಳಿದರು. X Y ವರ್ಣಗಳ ಮೇಲೆ
ಇವರ ಈ ಶ್ಲೇಷೆ ಆ ಕ್ಷಣವೆ ಹುಟ್ಟಿತು. ಒಮ್ಮೆ
ತರುಣನೊಬ್ಬಾತ ಇವರೆಡೆ ಬಂದು ಯಾವುದೋ
ತನ್ನ ಸಂಗತಿ ಹೇಳಿಕೊಂಡ. ಡಾಕ್ಟರು, "ಸರಿ;
ಇದಕ್ಕೆ ಔಷಧ ಪ್ಯಾರ-ಥೈರಾಯಿಡ್; ಅದ ಕೊಂಡು
ದಿನಕೆ ಎರಡೆರಡು ಮಾತ್ರೆಯ ತಿನ್ನಿ" ಎಂದರು.
ತರುಣ, ಅಪ್ಪಣೆ, ಎಂದು ಹೋದ; ಮರುದಿನ ಬಂದ,
"ಡಾಕ್ಟರೆ, ಪ್ಯಾರ ಥೈರಾಯಿಡ್ ಊರಲ್ಲಿ ಎಲ್ಲೂ
ದೊರೆಯದಿದೆ. ಥೈರಾಯಿಡ್ ಎಷ್ಟು ಬೇಕೆಂದರೂ
ಇದೆ, ಅದನು ತಿನ್ನಲೇ" ಎಂದ. ಡಾಕ್ಟರು ಅದಕೆ,
"ಪ್ಯಾರ ಥೈರಾಯಿಡ್ ಊರಲ್ಲಿಲ್ಲ ಥೈರಾಯಿಡ್
ಇದೆ, ಎಂದು ಅದಬಿಟ್ಟು ಇದನ್ನು ತಿನ್ನುವಿರಲ್ಲ?
ಅಣ್ಣ, ಶಾಸ್ತ್ರೀ ಹತ್ತಿರಕೆ ಹೋಗು ಎಂದರೆ
ಅವರಿಲ್ಲ ಸ್ತ್ರೀ ಹತ್ತಿರಕೆ ಹೋಗಲೇ ಎಂದು
ಕೇಳುತಿರುವಿರಿ, ಒಳ್ಳೆ ಬುದ್ಧಿವಂತರು, ಹೋಗಿ
ಪ್ಯಾರಾ ಥೈರಾಯಿಡ್ ಎಲ್ಲಿದೆ ಕೇಳಿ ತರಿಸಿರಿ"
ಎಂದು ನಕ್ಕರು. ಮಾತಿನಲಿ ಯುಕ್ತಿ, ಔಚಿತ್ಯ;
ಜೊತೆಗೆ ಬುದ್ಧಿಯ ವೇಗ. ಈ ಯುಕ್ತಿಯನು ಇವರು
ಒಮ್ಮೆ ಭಾಷಾಶಾಸ್ತ್ರದಲಿ ಬಳಸಿರುವುದುಂಟು.

ಇಂಗ್ಲೀಷ್ "ಚಿಕನ್" ಚಿಕ್ಕ ಹೆನ್ ಎಂಬದೊಂದಿವರ
ನಿರ್ವಚನ. ಕನ್ನಡದ ಮಾತುಗಳ ಮಧ್ಯದಲಿ
ಇಂಗ್ಲೀಷ ಬೆರಸುವುದು ಇವರಗತಿಬೇಸರ.
ಒಂದು ಬಟ್ಟಲು ಹಾಲು ಎಂಬುದನು ಜನ ಒಂದು
ಕಪ್ಪು ಹಾಲು ಎನಲು, ಛೆ ಛೆ ಬಿಳಿದಾಗಿರುವ
ಸರಿಯಾದ ಹಾಲ ಕುಡಿಯಿರಿ ಎನ್ನುವರು ಇವರು
ಯಾರೊ ಬಂದವರು " ಡಾಕ್ಟರ್ ನಿನ್ನೆ ನೈಟಿಂದ
ನನ್ನ ಥ್ರೋಟ್ ಬಹಳ ಪೇಯ್ನ್ ಆಗುತ್ತಿದೆ. 'ನೈಟೆಲ್ಲಾ
ಬಹು ಸಫರ್ ಮಾಡಿದೆ ಎಂದರು. ಡಾಕ್ಟರು
"ನೈಟೆಲ್ಲಾ ಬಹು ಸಫರ್ ಮಾಡಿದಿರಾ? ರೈಟ್ ಓ.
ಈಗ ಛೇರ್ ಮೇಲೆ ಸಿಟ್ ಮಾಡಿ, ಮೌತ್ ತೆರೆಯಿರಿ.
ನಾನು ಥ್ರೋಟ್ ಸೀ ಮಾಡುತ್ತೇನೆ" ಎಂದರು. ಇವರ
ಇಂಥ ಮಾತಿಗೆ ಲೆಕ್ಕವಿಲ್ಲ. ವೈದ್ಯಕಿಯಲೋ
ಇವರ ವಿಖ್ಯಾತಿ ದೇಶವನೆಲ್ಲ ತುಂಬಿದೆ.
ರೋಗವನು ಗುರುತಿಸುವ ಚತುರೇನು, ರೋಗಕ್ಕೆ
ಔಷಧವನೊರೆವ ನಿಶ್ಚಯವೇನು, ಅಂತೆಯೇ
ಶಸ್ತ್ರವನು ಹಿಡಿದು ಕೈನಡುಗದಂದಗಲಿನರ
ಸ್ನಾಯುವನು ಛೇದಿಸುವ ಬಂಧಿಸುವ ಧೀಮಂತ
ಚಳಕ ಲಾಘವವೇನು. ಭರತವರ್ಷದ ಬಹಳ
ಹೆಸರಾಂತ ಶಸ್ತ್ರವೈದ್ಯ ಪ್ರವೀಣರೊಳಿವರು
ಹೆಸರ ಪಡೆದಿಹರು. ಗಾಂಧೀ ಮಹಾತ್ಮರು ನಮ್ಮ
ನಾಡಿನಲಿ ಆರೋಗ್ಯವನು ಪಡೆಯ ಬಂದಂದು
ಅವರ ದೇಹಸ್ಥಿತಿಯ ಸಾವಧಾನಿಸಿ ನೋಡಿ
ಪರಿಚರಿಸಿ ದೇಶಸೇವೆಯನು ಗೆಯ್ದರು ಇವರು.
ಎಚ್ಚರದ ಮಾತ ಹೇಳುವುದರಲಿ ಡಾಕ್ಟರು

ಹಾಸ್ಯವನು ಬಳಸುವರು: ಊಟದಲಿ ಮಿತಿಯಿರಲಿ
ಎಂಬುದನು ಇವರು ಹೇಳುವ ರೀತಿ ಬಹು ಚೆನ್ನ.
"ಸ್ವಾಮಿ, ಇಕೊ ನೋಡಿ. ಒಬ್ಬೊಬ್ಬನೂ ಲೋಕಕ್ಕೆ
ಹೊರಟು ಬರುವಾಗ ಊಟದ ಚೀಟಿಯೊಂದನು
ಪಡೆದು ಬರುವನು. ಜೀವನಾಂಶವೆಂದೋ ಏನೊ
ಹೇಳುತಾರಲ್ಲ ಅದರಂತೆ. ಆ ಪಟ್ಟಿಯಲಿ
ಬರೆದಿರುವ ಆಹಾರ ಮುಗಿಯಿತೋ ಇಲ್ಲಿಂದ
ಅವನು ಹೊರಡುವುದೆ. ಆತುರಪಟ್ಟು ರುಚಿಗೆಂದು
ಹೆಚ್ಚು ಹೆಚ್ಚಾಗಿ ತಿಂದರೆ ಅವನ ಆಹಾರ
ಬೇಗ ಮುಗಿಯುವುದು,
ಬೇಗನೆ ಅವನು ಹೊರಡುವನು.
"ಆತುರವ ತಡೆದು ಮಿತವಾಗಿ ಉಂಡರೆ ಚೀಟಿ
ಬಹುದಿವಸ ಬರುವುದು, ಬಹುದಿವಸ ಬಾಳುವನು."
ವೈದ್ಯದಲಿ ಮಾತಿನಲಿ ಚತುರೆಂತು ಅಂತೆ ಈ
ನಮ್ಮ ಹಿರಿಯರು ಹತ್ತು ಜನಕೆ ಉಪಕಾರಿಗಳು.
ಬಾಲ್ಯದಲಿ ಸಾಮಾನ್ಯವಾದ ಬಾಳುವೆ ನಡೆಸಿ
ಕಷ್ಟವೆಂಬುದ ಕಂಡು ಬಡವರೆನೆ ಮನಕರಗಿ
ಸಾಹಾಯ್ಯ ಮಾಡುವರು. ಅಭಿಮಾನಿ, ಗುಣಶಾಲಿ,
ಸತ್ಯವಂತರು, ಎಲ್ಲರೀತಿಯಲು ಹಿರಿಯಣ್ಣ
ಗೆಳೆಯ ಎನಲರ್ಹರಾದಂಥ ಸಂಭಾವಿತರು.

ಅವರ ಮತ್ತೊಂದು ಹಾಸ್ಯ ಚಟಾಕಿ ಎಂದರೆ ಅವರನ್ನು ಯಾರಾದರು ತಮ್ಮ ಮನೆ ಎಲ್ಲಿ ಎಂದು ಕೇಳಿದರೆ "ಅದೆ ಕಣಯ್ಯ ಕೊಟಾಕಾಮಾಕ್ಷಯ್ಯ ಶೆಟ್ಟಿ ಮನೆ ಎದುರಿಗೆ ಸಾಚಾ ಸುಬ್ಬರಾಯನ ಮನೆ" ಎಂದು ಹೇಳುತ್ತಿದ್ದರು.

ಕನಕಪುರ ರಸ್ತೆಯಲ್ಲಿ ಆಗಿನ ಸುಪ್ರಸಿದ್ಧ ವ್ಯಾಪಾರಸ್ಥರಲ್ಲಿ ಒಬ್ಬರಾದ ಕೊಟಾಕಾಮಕ್ಷಯ್ಯ ಶೆಟ್ಟರ ನಿವಾಸವಿದ್ದಿತು. ಅದರ ಎದುರಿಗೆ ಎಸ್.ಸುಬ್ಬರಾಯರ ನಿವಾಸವಿದ್ದಿತು.

ಆಗಿನ ಕಾಲದ ಹೆಸರಾಂತ ವ್ಯಕ್ತಿಗಳು ಯಾವರೀತಿಯ ಆಡಂಬರವೂ ಇಲ್ಲದೇ ಸುಬ್ಬರಾಯರನ್ನು ಕಂಡು ವೈದ್ಯಕೀಯ ಸಲಹೆ ಪಡೆಯುತ್ತಿದ್ದರು. ಒಂದು ಘಟನೆ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರಿಗೆ ಸಂಬಂಧಪಟ್ಟಿದುದು.

ಸರ್.ಎಂ.ವಿಶ್ವೇಶ್ವರಯ್ಯನವರು ತಮ್ಮ ಠಾಕೂಠೀಕಾದ ಸೂಟು, ಬೂಟು, ಜರಿಪೇಟ ಧರಿಸಿ ಸರಿಯಾಗಿ ಹತ್ತು ಗಂಟೆಗೆ ಸುಬ್ಬರಾಯರ ಮುಂದೆ ಹಾಜರಾಗುತ್ತಿದ್ದರು. ಸಮಯ ಶಿಸ್ತಿಗೆ ಹೆಸರಾದವರು ಸರ್.ಎಂ.ವಿಶ್ವೇಶ್ವರಯ್ಯನವರು. ಗಡಿಯಾರ ಢಣ್,ಢಣ್, ಎಂದು ಹತ್ತು ಬಡಿಯಲು ಪ್ರಾರಂಭವಾಗುತ್ತಿದ್ದಂತೆ ಡಾ|| ಸುಬ್ಬರಾಯರ ಎದುರಿಗೆ ಹಾಜರು. ಸುಬ್ಬರಾಯರು ವಿಶ್ವೇಶ್ವರಯ್ಯನವರಿಗೆ ಹಾಸ್ಯವಾಗಿ ಹೇಳುತ್ತಿದ್ದರು. ನನಗೆ ನಿಮ್ಮನ್ನು ಪರೀಕ್ಷಿಸಲು ಬೇಕಾದ ಸಮಯ ನೀವು ಪುನಃ ಎಲ್ಲಾ ದಿರಿಸು ಧರಿಸಲು ತೆಗೆದುಕೊಳ್ಳುವ ಸಮಯಕ್ಕಿಂತ ಕನಿಷ್ಠಾಂಶ ಸಾಕು" ಎಂದು

ಜಯಚಾಮರಾಜ ಒಡೆಯರ್‌ರವರು ಮುಂದೆ ಮಹಾರಾಜರಾದರು. ಅವರು ಸುಬ್ಬರಾಯರ ಮೇಲೆ ಎಷ್ಟು ಅಪಾರ ಗೌರವ ಇಟ್ಟಿದ್ದರೆಂದರೆ, ಅವರು ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಬಂದಾಗ, ತಮ್ಮನ್ನು ಸ್ವಾಗತಿಸಲು ದ್ವಾರದ ಬಳಿಯೇ ನಿಂತಿದ್ದ ಸುಬ್ಬರಾಯರಿಗೆ ತಲೆ ಬಗ್ಗಿಸಿ ನಮಸ್ಕರಿಸಿದರು.

ಮತ್ತೊಂದು ಸ್ವಾರಸ್ಯಕರವಾದ ವಿಷಯ. ಒಮ್ಮೆ ಹೋಮಿಯೋಪತಿ ಮತ್ತು ಅಲೋಪತಿ ವೈದ್ಯಕೀಯ ಪದ್ಧತಿಗಳ ಮೇಲೆ ಚರ್ಚೆಮೊದಲಾಗಿ ಯಾವುದು ಉತ್ತಮ ಎಂದು ಬಿರುಸಾದ ವಾಗ್ವಾದ ನಡೆಯಿತು. ಶ್ರೀ ಸುಬ್ಬರಾಯರು ಆ

ಮೀಟಿಂಗ್‌ನ ಅಧ್ಯಕ್ಷರು. ಎರಡೂ ಪಕ್ಷದವರು ತಮ್ಮ ತಮ್ಮ ಪದ್ಧತಿಗಳನ್ನು ಕುರಿತು ಸಮರ್ಥನೀಯ ವಾದವನ್ನು ಮಂಡಿಸಿದರು. ವೈದ್ಯಕೀಯ ಮುಖ್ಯಸ್ಥರಾಗಿ ಸುಬ್ಬರಾಯರು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿತ್ತು. ಸುಬ್ಬರಾಯರು ತಮ್ಮ ಗಂಭೀರಧ್ವನಿಯಲ್ಲಿ ಹೇಳಿದರು" ನಾನು ಎರಡೂ ಕಡೆಯ ವಾದಗಳನ್ನು ಕೇಳಿದೆ. ಎರಡೂ ಪದ್ಧತಿಗಳಿಗೆ ತನ್ನದೇ ಆದ ಮೌಲ್ಯಗಳುಂಟು, ಅಪಮೌಲ್ಯಗಳುಂಟು(Merits and Demerits). ಕೊನೆಯದಾಗಿ ರೋಗವು ಗುಣವಾಗಲು ಹೋಮಿಯೋಪತಿಯಾಗಲೀ, ಅಲೋಪತಿಯಾಗಲೀ ಅಲ್ಲ. ಆದರೆ ಅದರ ಕಡೆಯ ನಿರ್ಧಾರ ತಿರುಪತಿ ವೆಂಕಟಚಲಪತಿಯದೇ" ಎಂದು ವಾತಾವರಣವನ್ನು ತಿಳಿಗೊಳಿಸಿದರು.

ಹೊಯ್ಸಳ ಕರ್ನಾಟಕ ಸಂಘ ಮತ್ತು ಡಾ॥ ಸುಬ್ಬರಾಯರು

ಹೊಯ್ಸಳ ಕರ್ನಾಟಕ ಸಂಘ ಬೆಂಗಳೂರು ಶಾಖೆ ಮೊದಲು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿತ್ತು. ಇದೇ ಸಮಯದಲ್ಲಿ ವಿಶ್ವೇಶ್ವರಪುರದಲ್ಲಿ ಡಾ॥ ದಾನಪ್ಪ ಎಂಬುವರ ಕಟ್ಟಡದಲ್ಲಿ ಬೊಬ್ಬುರಕಮ್ಮೆಹಾಸ್ಟಲ್ ತೆರವುಗೊಂಡಿತು. ಡಾ॥ ದಾನಪ್ಪನವರು ಡಾ॥ ಸುಬ್ಬರಾಯರ ಹಳೇ ವಿದ್ಯಾರ್ಥಿಗಳಲ್ಲಿ ಒಬ್ಬರು. ಅವರು ಡಾ॥ ಸುಬ್ಬರಾಯರ ಪ್ರಭಾವದಿಂದ ಈ ಕಟ್ಟಡವನ್ನು ಸಂಘದ ವಿದ್ಯಾರ್ಥಿ ನಿಲಯ ನಡೆಸಲು ತಿಂಗಳಿಗೆ ಕೇವಲ 50 ರೂ. ಬಾಡಿಗೆ ಮೇರೆಗೆ ಕೊಟ್ಟರು ಮತ್ತು ಅದೇ ಬಾಡಿಗೆಗೆ ಸಂಘ ಎಷ್ಟು ದಿನ ಬೇಕಾದರೂ ವಿದ್ಯಾರ್ಥಿ ನಿಲಯ ನಡೆಸಲಿ. ಅದನ್ನು ತೆರವು ಮಾಡಲು ನಾನಾಗೆ ಕೇಳುವುದಿಲ್ಲ ಎಂಬ ಆಶ್ವಾಸನೆಯನ್ನೂ ಕೊಟ್ಟರು.

ಮುಂದೆ 1943ರಲ್ಲಿ ಡಾ॥ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಗಣೇಶನ ಮಂಗಳಾರತಿಯ ಅಂಗವಾಗಿ ಡಾ॥ ಸುಬ್ಬರಾಯರ ಮಿತ್ರರೂ ಮತ್ತು ಅಂದಿನ ಸಚಿವರೂ ಆಗಿದ್ದ ದಾಸಪ್ಪನವರನ್ನು ಆಹ್ವಾನಿಸಿ ಅವರಿಗೆ ಸಂಘದ ಚಟುವಟಿಕೆಗಳನ್ನು ಮನವರಿಕೆ ಮಾಡಿ ಈಗಿನ ಹೊಂಬೆಗೌಡ ನಗರದ ನಿವೇಶನವನ್ನು ಅಂದಿನ CITB ಮೂಲಕ ಪುಕ್ಕಟೆಯಾಗಿ ದೊರಕಿಸಿಕೊಟ್ಟರು.

ವಿಕ್ಟೋರಿಯಾ ಆಸ್ಪತ್ರೆ ಸುವರ್ಣ ಮಹೋತ್ಸವ

1951ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಸುವರ್ಣ ಮಹೋತ್ಸವ ಬಹಳ ಅದ್ದೂರಿಯಿಂದ ನಡೆಯಿತು. ಸುವರ್ಣ ಮಹೋತ್ಸವದ ಸಮಿತಿಯ ಅಧ್ಯಕ್ಷರಾಗಿ ಶ್ರೀ ಸುಬ್ಬರಾಯರನ್ನು ಆರಿಸಲಾಗಿತ್ತು. ಈ ಸಮಿತಿ ಹಣಕಾಸಿನ ವ್ಯವಸ್ಥೆಗಾಗಿ ಹಿರಿಯ ಕಲಾವಿದರುಗಳಿಂದ ಸಹಾಯಾರ್ಥ ಪ್ರದರ್ಶನ, ಸಮಾಜದ ಗಣ್ಯ ವ್ಯಕ್ತಿಗಳಿಂದ ಚಂದಾವಸೂಲಿ. ಮಹಾಜನಗಳಿಂದ ಸ್ವ ಇಚ್ಛೆಯಿಂದ ಧನ ಸಹಾಯ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಇದರಲ್ಲಿ ರಾಜಾ ವೆಂಕಟರಾಮ ಶ್ರೇಷ್ಠಿಯವರಿಂದ ಅಪಾರ ಧನ ಸಹಾಯ ದೊರೆಯಿತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇವರ ಹೆಸರಿನಲ್ಲಿಯೇ ಒಂದು ಕಟ್ಟಡವಿದೆ. ಈ ಧನ ಸಹಾಯದಿಂದ ಹೊರರೋಗಿಗಳ ಚಿಕಿತ್ಸಾ ವಿಭಾಗ, ಪ್ಯಾಥಾಲಜಿ ವಿಭಾಗ, ಶಸ್ತ್ರಚಿಕಿತ್ಸಾ ವಿಭಾಗ ಮುಂತಾದ ವಿಭಾಗಗಳು ಅಭಿವೃದ್ಧಿಯಾಯಿತು.

ಇನ್ನೊಂದು ಪ್ರಸಂಗ : ಸುಬ್ಬರಾಯರು ಅವರ ಸಮಕಾಲೀನರೂ ಎಷ್ಟು ವಿನೋದ ಪ್ರಿಯರೆಂಬುದಕ್ಕೆ ದಾರ್ಶನಿಕರೂ, ಚಿಂತನಶೀಲರೂ, ಹಿರಿಯ ಸಾಹಿತಿಗಳೂ ಆದ ದಿ|| ಡಾ|| ಡಿ. ವಿ. ಜಿ. ಯವರು ತಮ್ಮ "ಜ್ಞಾಪಕ ಚಿತ್ರಶಾಲೆ" ಸರಣಿಯಲ್ಲಿ ನಮೂದಿಸಿರುವ ಕೆಳಕಂಡ ಘಟನೆ (ನೋಡಿ : ಕನ್ನಡ ಕಾವ್ಯಮಾಲೆ ಸಂಪುಟ 7, "ಜ್ಞಾಪಕ ಚಿತ್ರ ಶಾಲೆ" "ಹೃದಯ ಸಂಪನ್ನರು"; ಪ್ರಕಾಶನ : ಕಾವ್ಯಾಲಯ ಪ್ರಕಾಶಕರು, ಮೈಸೂರು. ಪುಟ 74-75-76. ಪುಸ್ತಕದ ಮರು ಪ್ರಕಾಶನ 1999. ಸಂಪನ್ನಗೊಂಡ ವ್ಯಕ್ತಿ ಧರ್ಮಪ್ರಕಾಶ ಸಜ್ಜನರಾಯರು)

ಈ ಪುಸ್ತಕದಿಂದ ಯಥಾವತ್ತಾಗಿ ತೆಗೆದುಕೊಂಡಿರುವ ಹೃದಯ ಸ್ಪರ್ಶಿ ಘಟನೆ. ಘಟನೆ ನಿರೂಪಣೆ : ಡಾ|| ಡಿ.ವಿ.ಜಿ.

ಪರಿಷ್ಕಾರ : ಸಜ್ಜನರಾಯರು ಯಾವ ಕೆಲಸವನ್ನು ತೆಗೆದುಕೊಂಡರೂ ಅದನ್ನು ಪರಿಷ್ಕಾರ ಕ್ರಮದಿಂದ ಮಾಡುತ್ತಿದ್ದರು. ಅವರು ಕಟ್ಟಿಸಿದ ದೇವಾಲಯದಲ್ಲಿ ವಿಗ್ರಹಗಳನ್ನೂ, ಕಂಭಗಳನ್ನೂ ಮಾತ್ರವೇ ಅಲ್ಲ, ನೆಲದ ಮೇಲಿನ ಹಾಸುಗಳನ್ನೂ

ಮಂಟಪದಲ್ಲಿನ ಹಾಸುಗಳನ್ನೂ ದಿನದಿನವೂ ತೊಳೆಯಬೇಕು. ಎಣ್ಣೆಯ ಜಿಡ್ಡು ಏನಾದರೂ ಇದ್ದರೆ ಅದನ್ನು ಉಜ್ಜಿ ಚೊಕ್ಕಟ ಮಾಡಬೇಕು. ಇದಕ್ಕಾಗಿ ತಿಂಗಳು ತಿಂಗಳೂ ಬೇಕಾಗುವ ಪೊರಕೆಗಳು, ಗೋಣಿ ತುಂಡಿನ ಬಟ್ಟೆ ಈ ಎಲ್ಲ ಪರಿಕರಂಗಳೂ ಪಟ್ಟಿ ಮಾಡಿ ಇಷ್ಟಿಷ್ಟು ವಿನಿಯೋಗ ಮಾಡತಕ್ಕದ್ದೆಂದು ಬರೆಯಿಸಿಟ್ಟರು. ಅದರಂತೆ ಕೆಲಸ ನಡೆಯುತ್ತಿದೆಯೆ ಎಂದು ತಾವು ಅಲ್ಲಲ್ಲಿ ಕೈ ಇಟ್ಟು ನೋಡಿ ಪರೀಕ್ಷಿಸುತ್ತಿದ್ದರು.

ದೇವಸ್ಥಾನಕ್ಕೆ ಜಾಗ ಬೇಕೆಂದು ದಿವಾನ್ ಮಿರ್ಜಾರವರಲ್ಲಿಯೂ, ಇತರ ಅಧಿಕಾರಿಗಳಲ್ಲಿಯೂ ಅವರು ಪದೇ ಪದೇ ಬರಬೇಕಾಗಿತ್ತು. ಆಗ ಅವರನ್ನು ನಾನು ಪದೇ ಪದೇ ಕಾಣುತ್ತಿದ್ದೆ. ಜಾಗ ದೊರೆತ ಮೇಲೆ ಕಟ್ಟಡಕ್ಕಾಗಿ ನಕಾಶೆ ತಯಾರಿಸಿದ್ದು, ಕೆಲಸಗಾರರನ್ನು ನಿಯಮಿಸಿಕೊಂಡಿದ್ದು, ಕಲ್ಲು ಇಟ್ಟಿಗೆಗಳ ಏರ್ಪಾಟು. ಈ ನಾನಾ ಕಾರುಬಾರುಗಳನ್ನು ಅವರು ನಡೆಸಿದ್ದನ್ನು ನಾನು ನೋಡಿದ್ದೇನೆ. ರಾಯರು ಸ್ವಂತ ಕೈಯಿಂದ ಮುಟ್ಟಿನೋಡಿ ಆಜಮಾಯಿಷಿ ಮಾಡದೆ ಇದ್ದ ಕಲ್ಲು ಆ ಕಟ್ಟಡದ ಒಳಗೆ ಒಂದು ಅಂಗುಲದಷ್ಟು ಇಲ್ಲ. ಪ್ರತಿಯೊಂದು ಸಣ್ಣ ತಪಶೀಲನೆಯನ್ನು ಸಹ ಅವರು ಪೋಲು ಮಾಡದೆ ನೋಡಿಕೊಂಡರು. ಕಟ್ಟಡದ ಕೆಲಸ ಎಂದು ಮೂರು ವರ್ಷ ನಡೆಯಿತೆಂದು ನನ್ನ ಜ್ಞಾಪಕ. ಪ್ರತಿದಿನವೂ ಬೆಳಿಗ್ಗೆ ಸುಮಾರು 8 ರಿಂದ ರಾತ್ರಿ 8 ರವರೆಗೂ ರಾಯರು ಅಲ್ಲಿಯೇ ಇರುತ್ತಿದ್ದರು. ಅವರ ಸ್ನೇಹಿತರೂ, ಇತರರೂ ಅವರನ್ನು ಕಾಣಲು ಅಲ್ಲಿಗೇ ಬರುತ್ತಿದ್ದರು.

ದುಡ್ಡು : ಗುಡಿಯ ಕಟ್ಟಡ ಮುಗಿಯಿತು. ಪ್ರತಿಷ್ಠೆಯಾಯಿತು. ಈಗ ಒಂದು ವಿನೋದ.

ಅಲ್ಲಿಗೆ ಸಮೀಪದಲ್ಲಿ ಸೀನಿಯರ್ ಸರ್ಜನ್ ಎಸ್. ಸುಬ್ಬರಾಯರ ಮನೆ. ನಾನು ಸ್ನೇಹದ ಭೇಟಿಗಾಗಿ ಅಲ್ಲಿಗೆ ಹೋಗಿದ್ದೆ. ಹತ್ತು ನಿಮಿಷದೊಳಗಾಗಿ ಸಜ್ಜನರಾಯರು ಅಲ್ಲಿಗೆ ಬಂದರು. ಡಾ॥ ಸುಬ್ಬರಾಯರು ಕೇಳಿದರು. "ಏನು ರಾಯರೆ, ಗುಡಿ ಕಟ್ಟಿಸಿದಿರಿ, ಬೋಳು ಬೋಳಾಗಿ ನಿಲ್ಲಿಸಿದಿರಿ, ಗೋಪುರ ಕಟ್ಟುವುದಿಲ್ಲವೇ? "

ಸಜ್ಜನರಾಯರು: "ದುಡ್ಡಿಲ್ಲ ಸ್ವಾಮಿ"

ಸುಬ್ಬರಾಯರು ತಕ್ಷಣವೇ ಕೋಣೆಯೊಳಕ್ಕೆ ಹೋಗಿ ಬಂದರು. ಒಂದು ಮೂರು ಕಾಸಿನ ಬಿಲ್ಲೆ ಅದರ ಒಂದು ಬಿಡಿ ಕಾಸು, ಇದನ್ನು ಮೇಜಿನ ಮೇಲೆ ಟುಕ್ಕಿದರು.

ಸಜ್ಜನರಾಯರು: ಇದೇನು?

ಸುಬ್ಬರಾಯರು : ದುಡ್ಡಿಲ್ಲವೆಂದಿರಲ್ಲ – ತೆಗೆದುಕೊಳ್ಳಿ. ಗೋಪುರ ಕಟ್ಟಿಸಿ. ಗೋಪುರವಿಲ್ಲದ ಗುಡಿಯನ್ನು ಎಷ್ಟು ದಿನ ನೋಡುವುದು.

ಸಜ್ಜನರಾಯರು ಆಗ ಹೇಳಿದರು. "ಸ್ವಾಮಿ, ಪುಣ್ಯಾತ್ಮರು ಲೋಕದಲ್ಲಿ ಯಾರಿದ್ದಾರೆಯೋ ಅಂಥವರೆಲ್ಲರಿಂದಲೂ ನಾನು ಹಣ ಬೇಡುತ್ತೇನೆ. ಇದರಲ್ಲಿ ನನ್ನದೇನೂ ಇಲ್ಲ. ನಿಮ್ಮಂಥವರ ಪುಣ್ಯದಿಂದ ದೇವರ ಕಾರ್ಯ ನಡೆಯಬೇಕು. ನಿಮ್ಮ ಈ ದುಡ್ಡಿನಿಂದಲೇ ಪುಣ್ಯ ಕಾರ್ಯ ಪ್ರಾರಂಭ. ಇದು ನಡೆದ ಒಂದೆರಡು ತಿಂಗಳುಗಳೊಗಾಗಿ ಗೋಪುರದ ಕೆಲಸ ಆರಂಭವಾಯಿತು. ರಾಯರು ಮಡಿಯುಟ್ಟು ಪತ್ನೀ ಸಮೇತರಾಗಿ ನಾಲ್ಕು ಬೀದಿ ತಿರುಗಿದರು. ಜನರಿಗೆಲ್ಲಾ ಒಳ್ಳೆಯ ಕಾರ್ಯವನ್ನು ಅಷ್ಟು ಒಳ್ಳೆಯವರು ಪ್ರಾರಂಭ ಮಾಡಿದರಲ್ಲ ಎಂದು ಸಂತೋಷ. ತಮ ತಮಗೆ ತೋರಿದ ಕಾಣಿಕೆಗಳನ್ನು ಅವರೆಲ್ಲಾ ರಾಯರ ತಟ್ಟೆಯಲ್ಲಿ ಹಾಕಿದರು. ಆ ಕಾಣಿಕೆಗಳಿಗೆ ಬೆಲೆಯನ್ನು ಬ್ಯಾಂಕಿನ ದೃಷ್ಟಿಯಿಂದ ಕಟ್ಟತಕ್ಕದ್ದಲ್ಲ. ಗಣಿತದ ದೃಷ್ಟಿಯಿಂದಲೂ ಅಲ್ಲ. ಜನರ ಮನೋಭಾವದ ದೃಷ್ಟಿಯಿಂದ. ಬಡ ಜನರ ಪರಿಶುದ್ಧವಾದ ಭಕ್ತಿ. ತಮ್ಮ ಪ್ರಯತ್ನದಲ್ಲಿ ಸೇರಬೇಕೆಂದು ಸಜ್ಜನರಾಯರ ಹಂಬಲ".

ಕೃತಕೃತ್ಯತೆ : ಗೋಪುರದ ಕೆಲಸ ಮುಗಿದ ಮೇಲೆ ಕಲಶ ಸ್ಥಾಪನೆಯಾಗಿ ಸಂಪ್ರೋಕ್ಷಣೆ ನಡೆದ ದಿನ ಸಜ್ಜನರಾಯರನ್ನು ನೋಡಬೇಕು. ಆಗ ಅವರು ಕೃತಕೃತ್ಯತೆಯ ಸಂತೋಷದ ಮೂರ್ತಿ ಸ್ವರೂಪವದು. ತುಂಬ ಆನಂದ. ಮನುಷ್ಯ

ಜೀವನದ ಸಾರ ಭಾಗವೆಂದರೆ ಆ ಸಂತೋಷ ಅಂಥ ನಿರ್ಮಲವಾದ ಸಂತೋಷಕ್ಕಾಗಿ ಬದುಕಬೇಕು. "0ಯಾರಿಗೆ ಆ ಸಂತೋಷ ದೊರೆತಿದೆ0ಯೋ ಅವರೇ ಧನ್ಯರು".


ಸುಬ್ಬರಾ0ಯರು ಗೋಪುರದ ನಿರ್ಮಾಣಕ್ಕಾಗಿ ಆ ಮೇಲೆ ಹೇಳಿದ "ದುಡ್ಡು" (ಆಗಿನ ಕಾಲದಲ್ಲಿ ನಾಲ್ಕು ಪೈಸೆಗೆ ಒಂದು "ದುಡ್ಡು" ಎಂದು ಕರೆ0ಯುತ್ತಿದ್ದರೆಂದು ಹಿರಿ0ಯರಿಂದ ಕೇಳಿದ್ದೇವೆ.) ಭಾರಿ ಮೊತ್ತದ ಮೊಬಲಗನ್ನೇ ಕಾಣಿಕೆ0ಯಾಗಿ ನೀಡಿದರು. ಗಳಿಸಿದ್ದರಲ್ಲಿ ಕೊಂಚ ಭಾಗವನ್ನಾದರೂ ಸದ್ವಿನಿ0ಯೋಗವಾಗಬೇಕೆಂಬುದು ಅವರ ಅಂತರಾಳದ ಇಚ್ಛೆ.

ಡಾ॥ ಸುಬ್ಬರಾ0ಯರು ಜ0ಯನಾಮ ಸಂವತ್ಸರ ಪೌಷ ಶುಕ್ಲ 9ನೇ ರವಿವಾರ ರೇವತಿ ನಕ್ಷತ್ರದಲ್ಲಿ, ಅಂದರೆ 2ನೇ ಜನವರಿ1955ನೇ ಭಾನುವಾರ ನಿಧನರಾದರು.

1 ನೇ ಪೀಳಿಗೆ	2 ನೇ ಪೀಳಿಗೆ	3 ನೇ ಪೀಳಿಗೆ	4 ನೇ ಪೀಳಿಗೆ	5 ನೇ ಪೀಳಿಗೆ	6 ನೇ ಪೀಳಿಗೆ	7 ನೇ ಪೀಳಿಗೆ	8 ನೇ ಪೀಳಿಗೆ
	1341 ಡಾ.ಸುಬ್ಬರಾಯರ ವಂಶ						
I ರಾಮಪ್ಪ, ಭಾಗೀರಥಮ್ಮ	13. ಮುದ್ದು ಲಕ್ಷ್ಮೀನಾರಣಪ್ಪ + ವೆಂಕಮ್ಮ	134. ಶ್ರೀಕಂಠಯ್ಯ	1341. ಡಾ.ಸುಬ್ಬರಾವ್ + ವೆಂಕಟಲಕ್ಷ್ಮಿ	13411. ಡಾ॥ ಎಸ್.ರಾಮಸ್ವಾಮಿ + ಮಹಾಲಕ್ಷ್ಮಮ್ಮ	134111. ಆರ್.ನರಸಿಂಹಸ್ವಾಮಿ + ಪ್ರೇಮ	1341111. ಜಯಂತ್ + ವಿದ್ಯಾ	
						1341112. ಅರುಣ್ + ದೀಪ್ತಿ	13411121. [illegible]
					134112. ಆರ್.ಶಿವಸ್ವಾಮಿ + ಉಮಾ	1341121. ಪ್ರದೀಪ್ + ಸಂಜನಾ	13411211. [illegible]
						1341122. ಚೇತನಾ + ಸುನಿಲ್	13411221. [illegible]
					134113. ಆರ್.ದೊರೆಸ್ವಾಮಿ + ಶೋಭಾ	1341131. ವಿಕ್ರಾಂತ್	
						1341132. ವಿನೀತ್	
					134114. ಆರ್.ಶ್ರೀಕಂಠಸ್ವಾಮಿ + ಮೀರಾ	1341141. ಅಶ್ವಿನ್	
						1341142. ಅರವಿಂದ್	
						1341143. ಸಿಂಧೂರ್	
					134115. ಆರ್.ರವಿಕುಮಾರ್ + ಸಂಧ್ಯಾ	1341151. ಸುನೀಲ್	
						1341152. ತೃಪ್ತಿ	
						1341153. ಸ್ವಾತಿ	
				13412. ಎಸ್.ಅನಂತಸ್ವಾಮಿ + ವೆಂಕಮ್ಮ	134121. ಲೀಲಾ		
					134122. ಗೀತಾ + ಪ್ರಭಾಕರ್		
					134123.ಉಮಾ		
					134124. ಉಷಾ + ಅನಂತಸ್ವಾಮಿ	1341241. ನಾಗಶ್ರೀ	

1 ನೇ ಪೀಳಿಗೆ	2 ನೇ ಪೀಳಿಗೆ	3 ನೇ ಪೀಳಿಗೆ	4 ನೇ ಪೀಳಿಗೆ	5 ನೇ ಪೀಳಿಗೆ	6 ನೇ ಪೀಳಿಗೆ	7 ನೇ ಪೀಳಿಗೆ	8 ನೇ ಪೀಳಿಗೆ
1 ರಾಮಯ್ಯ, ಭಾಗೀರಥಮ್ಮ	13. ಮುದ್ದು ಲಕ್ಷ್ಮಣಶಾಸ್ತ್ರಿ + ವೆಂಕಮ್ಮ	134. ಶ್ರೀರಾಮಯ್ಯ	1341. ಟಿ.ಸುಬ್ಬರಾವ್ + ವೆಂಕಟಲಕ್ಷ್ಮಿ	13413. ವಿಶಾಲಾಕ್ಷಿ + ಎಂ.ಎಸ್.ರಾಮ ಸ್ವಾಮಿ	134131. ಇಂದಿರಾ (ಅಪ್ಪು)		
					134132. ವಿಜಯಾ + ಎಸ್.ವಿ.ವಾಸುದೇವ್	1341321. [illegible] + [illegible]	13413211. [illegible]
							13413212. [illegible]
						1341322. ಲಕ್ಷ್ಮಿ + [illegible]	13413221. [illegible]
							13413222. [illegible]
					134133. ಎಂ.ನರಸಿಂಹಸ್ವಾಮಿ + ಉಷಾ	1341331. [illegible] + [illegible]	13413311. [illegible]
							13413312. [illegible]
						1341332. ಶ್ರೀರಾಂ	
					134134. ಆನಂದ(ಮಾಧವ) + ತಾರಾ	1341341. ಶ್ರೀನಿಧಿ	
						1341342. ಶುಭಾ	
				13414. ಎಸ್.ನಾರಾಯಣ ಸ್ವಾಮಿ + ಗೌರಮ್ಮ	134141. ನರಸಿಂಹಮೂರ್ತಿ + ವಿಜಯಾ	1341411. ಜಯಸಿಂಹ + [illegible]	13414111. [illegible]
						1341412. ರಮ್ಯ	
					134142. ವಾಸುಕಿ + ಶೀಲಾ	1341421. ಸಾತ್ವಿಕ್	
						1341422. ಗೌತಮ್	
					134143. ಲಕ್ಷ್ಮೀ + ನಾರಾಯಣರೆಡ್ಡಿ		
				13415. ಎಸ್.ಕೃಷ್ಣಸ್ವಾಮಿ + ವಿಜಯಲಕ್ಷ್ಮಿ	134151. ವಿಕ್ರಮ್ + ಬಕುಳಾ	1341511. ನೀಲಾಬ	
						1341512. ನಿಶಾಂತ	
					134152. ರಂಜನಾ + ರಂಗನಾಥ್	1341521. ಅರುಣಿ	
						1341522. ಪಾವನಿ	

1 ನೇ ಪೀಳಿಗೆ	2 ನೇ ಪೀಳಿಗೆ	3 ನೇ ಪೀಳಿಗೆ	4 ನೇ ಪೀಳಿಗೆ	5 ನೇ ಪೀಳಿಗೆ	6 ನೇ ಪೀಳಿಗೆ	7 ನೇ ಪೀಳಿಗೆ	8 ನೇ ಪೀಳಿಗೆ
1 [illegible]	13. [illegible] + [illegible]	134. [illegible]	1341. ಶಾ.ಸುಬ್ಬರಾವ್, [illegible]	13416. ಎಸ್.ಗೋಪಾಲಸ್ವಾಮಿ ಅನಸೂಯ	134161. ಸುಬ್ರಹ್ಮಣ್ಯ (ಸುಮಾ) + ಮಹೇಶ	1341611. [illegible]	
						1341612. [illegible]	
				13417. ಎಸ್.ರಂಗಸ್ವಾಮಿ ವಿಜಯಾ	134171. ವಿಜಯಸಿಂಹ + ಗೀತಾ	1341711. (ಗ)	
						1341712. (ಗ)	
					134172. ಉದಯಸಿಂಹ		
			1341. ಶಾ.ಸುಬ್ಬರಾವ್, [illegible]	13418. ಎಸ್.ವೆಂಕಟಲಕ್ಷ್ಮಿ + ನಾಗಭೂಷಣರಾವ್	134181. ಸುಬ್ಬರಾವ್ + ಸೀತಾ	1341811. [illegible]	
						1341812.	
					134182. ಕೃಷ್ಣಸ್ವಾಮಿ (ಮಂಜು) + ಶೀಲಾ		



QUALIFICATION TO PRACTISE MEDICINE, SURGERY AND MIDWIFERY.

I Thomas Barlow Baronet President of the Royal College of Physicians of London with the consent of the Fellows of the same College have under the authority given to us by Royal Charter and Act of Parliament granted to

Srikantia Subba Rao

who has satisfied the College of his proficiency our Licence under the said Charter to practise Physic including therein the practice of Medicine, Surgery and Midwifery so long as he shall continue to obey the Statutes, Bye-Laws and Regulations of the College relating to Licentiates: in witness whereof we have this day set our Seal and Signatures. Dated at the College the Twenty eighth day of July in the year of our Lord one thousand nine hundred and ten

Thomas Barlow President.

EXAMINERS.

[illegible]	[illegible]
[illegible]	[illegible]
James Galloway M.D.	[illegible]
[illegible]	[illegible]

I Certify that Srikantia Subba Rao to whom this Licence has been granted by the College and whose Signature is subjoined has been duly admitted to practise Physic as a Licentiate of the College and that such Licence is a Legal authority to him to practise Medicine, Surgery and Midwifery, and to dispense Medicines but only to those who are his own patients.

Licentiate Srikantia Subba Rao Registrar J A Ormerod M.D

ರಾಯಲ್ ಕಾಲೇಜ್ ಆಫ್ ಫಿಜಿಷಿಯನ್ಸ್, ಲಂಡನ್‌ನ ಸರ್ಟಿಫಿಕೇಟ್



ಡಾ॥ ಸರ್ ವಿಶ್ವೇಶ್ವರಯ್ಯ



ಶ್ರೀಮತಿ ವೆಂಕಟಲಕ್ಷಮ್ಮ



ಶ್ರೀಮತಿ ಪಾರ್ವತಮ್ಮ



ಡಾ॥ ಡಿ.ಎಸ್. ಪುಟ್ಟಣ್ಣ, ಡಾ॥ ಸುಬ್ಬರಾಯರು, ಡಾ॥ ಕೆ. ಶ್ರೀನಿವಾಸಾಚಾರ್





ನಾಲ್ವಡಿ ಕೃಷ್ಣರಾಜ ಒಡೆಯರ್‌ರೊಂದಿಗೆ ಡಾ|| ಸುಬ್ಬರಾಯರು






ನಾಲ್ವಡಿ ಕೃಷ್ಣರಾಜ ಒಡೆಯರ್‌ರೊಂದಿಗೆ ಡಾ॥ ಸುಬ್ಬರಾಯರು





ಮಹಾತ್ಮ ಗಾಂಧೀಜಿಯವರೊಡನೆ ಡಾ॥ ಸುಬ್ಬರಾಯರು





ಜಯಚಾಮರಾಜ ಒಡೆಯರ್‌ರೊಂದಿಗೆ ಡಾ॥ ಸುಬ್ಬರಾಯರು



ಜಯಚಾಮರಾಜ ಒಡೆಯರ್‌ರವರು ಡಾ॥ ಸುಬ್ಬರಾಯರೊಂದಿಗೆ
ಜಪಾನ್‌ನಿಂದ ಹಿಂತಿರುಗಿದಾಗ



ಸರ್ ಮಿರ್ಜಾ ಇಸ್ಮಾಯಿಲ್‌ರೊಂದಿಗೆ ಡಾ॥ ಸುಬ್ಬರಾಯರು




ಚಿಕ್ಕಮಗಳೂರು ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಡಾ॥ ಸುಬ್ಬರಾಯರು





ಜಪಾನ್‌ನಲ್ಲಿ ತೆಗೆದ ಛಾಯಾಚಿತ್ರ





ಅಕ್ಕಿ ಹೆಬ್ಬಾಳು ಆಸ್ಪತ್ರೆ ಉದ್ಘಾಟನಾ ಸಮಾರಂಭ






ಜಯಚಾಮರಾಜೇಂದ್ರ ಒಡೆಯರ್‌ರೊಂದಿಗೆ ಜಪಾನಿನಲ್ಲಿ




ವಿಶ್ವೇಶ್ವರಪುರದ "ಸತ್ತುಮ" ಮನೆ




ಎಂ.ಐ.ಟಿ.ಎಲ್. ಸಮಾರಂಭದಲ್ಲಿ



ಹೊಯ್ಸಳ ಕರ್ನಾಟಕ ಸಂಘ ಸಮಾರಂಭ



ಗಾಂಧೀಜಿಯವರು ಬರೆದ ಪತ್ರದ ಲಕೋಟೆ



Dear Dr [illegible]

[illegible] you [illegible] Kumarappa who is [illegible] organiser of A.I.V.I. Association [illegible] girl who has, as [illegible] [illegible] with us. The former is said to suffer from something in connection with his [illegible] and had tonsils, the latter from had tonsils. I have brought them here for change. If you do not mind I should like you to examine them. If you think that they should come to Bangalore, I would gladly send them on hearing from you.


Sardar & I are doing well.

Nandi Hill 14/5/36

Yours sincerely

M.K.Gandhi

ಗಾಂಧೀಜಿಯವರ ಪತ್ರ



Chandrashekar Shukla
[illegible]
[illegible], BARODA

July 19, 1948

Dear Doctor Saheb


The enclosed leaflet speaks for itself. I shall feel deeply grateful if you kindly send me your reminiscences of Gandhiji for the proposed volume within the prescribed time limit, i.e. before the 30th of September. I have undertaken the work in the belief that this record is one of the least things that we owe to his dear and revered memory; and the effort can hope to succeed only with the blessings, help and collaboration of those who had an opportunity of coming in contact with him. His attitude to medicine and health, his serious remarks, as also his repartees — all these have a place in the book, as reflecting the various phases of his rich personality. I am keen on having your contribution because of the value I attach to it, as also because a similar opportunity may not recur in the near future, this being the most opportune time for it. I am, therefore, approaching you in the sure hope of a favourable response, and I am sure you will kindly not disappoint me.

A line just to say "yes" will very much reassure me.

With respectful regards
Yours sincerely
C. Shukla

Dr. Subba Rao
Bangalore

ಚಂದ್ರಶೇಖರ ಶುಕ್ಲರವರ ಪತ್ರ



SSR

Dr. S. Subba Rao
[illegible] Sep. 19[illegible]

Continue to hold him by the nose, in my daily prayer.
Yours sincerely
SSR


Dear Sir

Only three days ago I received your letter of July 19th addressed to the care of Shri K. T. [illegible]. As you are, no doubt aware he had gone away from India on a world tour, and returned only a few days ago, which accounts for the delay in receiving your kind letter.

As my contacts with the Mahatmaji were very few and far between, I am sorry I am not able to contribute anything worthy of being published in the volume you are preparing, although I have been a great admirer and worshipper of the great god-man ever since I saw him for the first time in 1927, when he was taking rest at a hill-station called Nandi Hills, about 25 miles from Bangalore. Once a week I used to go there to see him, take his blood pressure, and give him what advice I could. Luckily, the blood-pressure came down, and he was very much better in health when he left Bangalore after a couple of months.

Once Mahatmaji had some little ear trouble. While examining his ear, I remarked that I was one of the very few persons privileged to pull him by the ear. Immediately he turned round with the usual beaming smile on me and said "Do you know, Doctor, I can lead you by the nose?" I at once acknowledged the correctness of his statement. I very often think of this little incident. He led, not only me, but the whole of India" by the nose". May his divine spirit always

ಸುಬ್ಬರಾಯರು ಶ್ರೀ ಶುಕ್ಲರವರಿಗೆ ಬರೆದ ಪತ್ರ




8. 11. 35.

My dear Subba Rao,

Your letter arrived this morning, and I hasten to add my congratulations to the many you will have received on the great distinction you have received at the hands of the Maharaja. I cannot remember that any other of your Profession has received so great a decoration. To me it is a double pleasure. I am delighted that one of my much loved Students should have rendered service to the State so great as to call forth this recognition. I did a good deed both for you and for the Mysore State when I gave you a Free-ship in my School. May you live long to enjoy what you have so fully deserved. And in the second place I am more than delighted that you retain enough affection for your old Teacher to send me the news of this recognition. Your affection is very dear to me.

I should like to hear that your sons are following in their Father's footsteps. Give my love to Ramaswami and tell him that I have not forgotten his visits to me.

You may have heard that my son Romilly is now in India. He has been appointed Principal of the Islamia College near Peshawar. This is at once a great opportunity and a great responsibility. When he took part in the expedition which climbed Mt Kamet, he fell in love with India, so now he is there seeking to serve her as his father did long ago



I am thankful to say that both my wife and I are very well. Of course advancing years take their toll of us both, and we cannot attempt things that were easy some years back. But the years cannot rob us of our love for our friends, and we are proud to count you among them.

With every good wish for your health and success

I remain faithfully your friend

W. H. Holdsworth

ಹೋಲ್ಡ್ಸ್‌ವರ್ತ್‌ರವರ ಪತ್ರ

HOTEL CLARIDGE
PARIS

18th February 31

My dear Dr. Subba Rao,

I received the letter you sent me through Mr. Thamban Chetty. It explains fully what you have thought best to do in regard to Jaya's tonsils. I am glad to hear the first treatment was partially successful and you intend treating him again after a month or so's rest. I hope it will be a cure and that will give Jaya the needed relief to the throat.

I have had a very pleasant and interesting time as well so far this time in Europe. I hope to wend my way back home after a brief visit to the Riviera.

This is my first experience of winter in Europe. It has not been such a bad one.

It gave me great pleasure

HOTEL CLARIDGE
PARIS

2

11/3/31

to see your son in London & I was glad to find him looking so well. He has put on some flesh since I last saw him & I believe he is doing marvellously well with regard to his studies.

I hope before long to see you and with my best wishes to you in the mean time.

Yours sincerely,
K. N. R. Wadiyar

ಯುವರಾಜರ ಪತ್ರ

Chamundi Vihar,
Mysore.

3. 12. 38.

My dear Dr. Subbarao,

I was very pleased to receive your letter and the News paper cutting about <u>excessive</u> use of alcohol. I quite admit that eminent doctors do not advocate <u>excessive</u> use of alcohol.

I thank you very much for the keen interest you have displayed and are displaying in my welfare. I am glad to tell you that I am feeling much better now and that the swellings on my legs have almost disappeared.

I intend going to Madras next week for a change and return here in time for the Viceregal visit in January next.

Hope I shall have the pleasure of seeing you soon.

With best wishes,

Yours sincerely,

K. N. R. Wadiyar

ಯುವರಾಜರ ಪತ್ರ


ಹೊಯ್ಸಳ ಮಾಲೆ


ಹೊಯ್ಸಳ ಕರ್ನಾಟಕ ಜನಾಂಗವು ಸ್ಮಾರ್ತಬ್ರಾಹ್ಮಣ ಸಂಪ್ರದಾಯದ ಒಂದು ಪುಟ್ಟ ಪಂಗಡ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಇವರ ಇರುವು. ವಿಜಯನಗರದ ಕಾಲದಲ್ಲಿ ಕೆಲವು ಕುಟುಂಬಗಳು ತಮಿಳುನಾಡಿನ ತಂಜಾವೂರು ಪ್ರದೇಶಕ್ಕೆ ತೆರಳಿ, ಇಂದಿಗೂ ಕೆಲವು ಕುಟುಂಬಗಳು ಅಲ್ಲಿಯೇ ನೆಲೆಸಿವೆ. ಸಮಾಜದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜನ ಇಂದು ವಿಶ್ವದ ನಾನಾ ಭಾಗಗಳಲ್ಲಿದ್ದಾರೆ.



ನಮ್ಮ ಪಂಗಡ ಪುಟ್ಟದಾದರೂ ನಮ್ಮ ಅನೇಕ ಜನರು ಪ್ರಖ್ಯಾತರಾಗಿ ಸಮಾಜಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿ ಕೀರ್ತಿಶಾಲಿಗಳಾಗಿದ್ದಾರೆ. ಜನತೆಯ ವಿಶ್ವಾಸ, ಗೌರವ ಮನ್ನಣೆಗೆ ಪಾತ್ರರಾಗಿರುವ ಅನೇಕರೂ, ಉದಯೋನ್ಮುಖ ಪ್ರತಿಭಾವಂತರೂ ಇಂದು ನಮ್ಮೊಡನೆಯೇ ಇದ್ದಾರೆ.

ಈ ಎಲ್ಲಾ ಪ್ರತಿಭಾಸಂಪನ್ನರನ್ನು ನಮ್ಮ ಇಂದಿನ ಪೀಳಿಗೆಗೂ, ಸಮಾಜಕ್ಕೂ ಪರಿಚಯಿಸಿ, ಪ್ರಚರಿಸಿ, ದಾಖಲಿಸುವ ಸದುದ್ದೇಶದಿಂದ ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘವು ಈ ಹೊಯ್ಸಳ ಮಾಲೆಯ ಪ್ರಕಟಣಾ ಕಾರ್ಯವನ್ನು ಕೈಗೊಂಡಿದೆ.








2.3. 2008ರಂದು ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಮೈಸೂರಿನಲ್ಲಿ ಬಿಡುಗಡೆಯಾದ ಹೊಯ್ಸಳ ಮಾಲೆಯ ಮೊದಲ ಪುಸ್ತಕಗಳು.

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027
ಫೋನ್ : +91-80-2227 4411